ಜನಪದ ಸೇವಕ

ಬೆಲೆ : ರೂ ೧೦-೦೦

ಚಿಂತನ ದರ್ಶನ ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ - ೧೬ ಫೆಬ್ರವರಿ -೨೦೧೬ ಸಂಚಿಕೆ - ೭

ಅಶಾಂತಿಯ ಕುದಿತದಲ್ಲಿ ಜಗತ್ತು

*

ಗಾಂಧೀಜಿಯನ್ನು ಜಗತ್ತಿಗೆ ಪರಿಚಯಿಸಿದ ಲೂಯಿ ಫಿಶರ್

*

ಯುದ್ಧಗಳು ಹಾಗೂ ಆಯುಧಗಳು

*

ಕೈಗಾರಿಕೀಕರಣದಿಂದ ಗ್ರಾಮಸ್ವರ ಮತ ಹರಣ

ಜನಪದ ವಿಚಾರದಲ್ಲಿ

ಫೆಬ್ರವರಿ - ೨೦೧೬

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಫೆಬ್ರವರಿ - ೨೦೧೬
ಸಂಪುಟ - ೧೬
ಸಂಚಿಕೆ - ೭

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್ (ರಿ)
ಮೇಲುಕೋಟೆ - 571431
ಮಂಡ್ಯ ಜಿಲ್ಲೆ

ಫೋನ್ : 9141700812
08236 - 299854
email :
janapada@yahoo.com
Web: janapada.org

ನೀರ ಪಯಣ

ಅತುಲ ನೀಲ ಕಡಲಿಗೆ
ನೀರ ಪಯಣ ಸಾಗಿದೆ ।
ಬಿಂದು ಸಿಂಧು ಸೇರಿದೆ,
ಜೀವ ಸೂತ್ರ ಉಸುರಿದೆ ॥

ರವಿಗೆ ಗಗನ ಏರುವಾಸೆ,
ಭುವಿಯ ನೀರ ಹೀರುವಾಸೆ ।
ಬಾಷ್ಪ - ಪುಷ್ಪ ಅರಳಿದೆ,
ಮುಗಿಲ ರೂಪ ತಳೆದಿದೆ ॥

ಮಳೆಗೆ ಇಳೆಯ ಸ್ನೇಹ ಬೆಸುಗೆ,
ಇಳೆಗೆ ಮಳೆಯ ತೇವದೊದಿಕೆ ।
ಜೀವ - ಭಾವ ತುಂಬಿದೆ,
ಹಸಿರ ಹೊಸತು ತಂದಿದೆ ॥

ಗಿರಿಯ ಮೇಲೆ ಹಿಮದ ಭಾಪ,
ಕಣಿವೆ ಕೊರೆದು ನದಿ ಪ್ರಲಾಪ।
ಗುಡ್ಡ - ಬೆಟ್ಟ ಸುತ್ತಿದೆ,
ಬಯಲು ಸೀಮೆಗಿಳಿದಿದೆ ॥

ಭೂಮಿಯೊಳಗೆ ಇಳಿವ ತವಕ,
ನೆಲದ ದಾಹ ತೀರೊತನಕ।
ಝರಿಯು ನೆಲದಿ ಚಿಮ್ಮಿದೆ,
ಒಡಲು ತುಂಬಿ ತುಳುಕಿದೆ ॥

ಹರಿವ ನೀರ ಹೆಜ್ಜೆ - ಗೆಜ್ಜೆ,
ಥಳಕು - ಬಳಕು ಭಾವ ಲಜ್ಜೆ।
ನೀರು ತೆವಳಿ ದಣಿದಿದೆ,
ಹಳ್ಳ - ಕೊಳ್ಳ ತುಂಬಿದೆ ॥

ಹಲವು ರೂಪ ಧರಿಸಿಕೊಂಡು,
ಮಣ್ಣ ಬಣ್ಣ ಮೆತ್ತಿಕೊಂಡು।
ಅಬ್ಬಿ ನೆಲದಿ ಕುಣಿದಿದೆ,
ಸುಗ್ಗಿ ಕಾಲ ತಂದಿದೆ ॥

ಬರಡು ಭುವಿಗೆ ಚಿಗುರುವಾಸೆ,
ತೆನೆಯ ಬಿಚ್ಚಿ ನಲಿಯುವಾಸೆ।
ಧಾನ್ಯ ಕಣಜ ತುಂಬಿದೆ,
ದುಡಿಮೆ ಹಿರಿಮೆ ಗಳಿಸಿದೆ ॥

- ನಾರಾಯಣ ಶೆಣೈ.ಕೆ (ಸಾಭಾರ ಉತ್ಥಾನ)

ಚಿಂತನೆಗೊಂದು ಸಂಗತಿ

ಅಖಿಲ ಭಾರತ ಸರ್ವೋದಯ ಮಂಡಲಿಯ ಮುಖ ಪತ್ರಿಕೆಯಾದ "ಸರ್ವೋದಯ ಜಗತ್" ಪತ್ರಿಕೆಯಲ್ಲಿ ಒಂದು ಮಾತನ್ನು ವಿಶೇಷ ರೀತಿಯಲ್ಲಿ ಮುದ್ರಿಸಿದ್ದು ಕಣ್ಣಿಗೆ ಬಿತ್ತು. ಆ ಮಾತು ಹೀಗಿದೆ: "ನೀವು ಪಾಶ್ಚಿಮಾತ್ಯ ಸಂಸ್ಕೃತಿಯನ್ನು ನಿಮ್ಮದನ್ನಾಗಿಸಿಕೊಳ್ಳುತ್ತಿದ್ದೀರಿ. ಇದಕ್ಕೇನು ವಿರೋಧವಿಲ್ಲ. ಆದರೆ ಒಂದು ಮಾತನ್ನು ಅವಶ್ಯವಾಗಿ ನೆನಪಿಡಿ ಸೂರ್ಯ ಪಶ್ಚಿಮಕ್ಕೆ ಹೋದಾಗಲೆಲ್ಲ ಮುಳುಗಿರುತ್ತಾನೆ". ನಾವು ಭಾರತೀಯರು ನಮ್ಮ ಜೀವನದ ಎಲ್ಲ ವಿಚಾರಗಳಲ್ಲಿ ಮತ್ತು ಕಾರ್ಯ ಕ್ಷೇತ್ರಗಳಲ್ಲಿ ಪಾಶ್ಚಿಮಾತ್ಯ ಸಂಸ್ಕೃತಿಯನ್ನು ಅನುಸರಿಸುತ್ತಿದ್ದೇವೆ. ನಮ್ಮ ವೇಷ-ಭೂಷಣ, ಆಹಾರ ಪದ್ಧತಿ, ಶಿಕ್ಷಣ ವಿಚಾರ, ಸಾಂಸ್ಕೃತಿಕ ವಿಚಾರ ಮುಂತಾದ ಎಲ್ಲ ಖಾಸಗಿ ಜೀವನದಲ್ಲಿಯೂ ಪಾಶ್ಚಿಮಾತ್ಯದ ಅನುಕರಣೆ ಜೋರಾಗಿ ನಡೆದಿದೆ. ಜೀವನದ ಪ್ರಮುಖ ವೈಚಾರಿಕ ಕ್ಷೇತ್ರಗಳಾದ ಸಾಹಿತ್ಯ, ಕಲೆಗಳು ಪಾಶ್ಚಿಮಾತ್ಯ ಚಿಂತನೆಯ ಪ್ರಭಾವದಿಂದ ತಪ್ಪಿಸಿಕೊಳ್ಳಲಾಗಿಲ್ಲ. ಜಾನಪದ ಸಾಹಿತ್ಯ, ಗ್ರಾಮೋದ್ಯೋಗಗಳು, ಪಾಶ್ಚಿಮಾತ್ಯ ತಂತ್ರಜ್ಞಾನದ ಕಾರಣದಿಂದಾಗಿ ತಮ್ಮ ಮೂಲ ಸ್ವರೂಪವನ್ನು ಕಳೆದು ಕೊಳ್ಳುತ್ತೇವೆ. ಜಾನಪದ ಸಾಹಿತ್ಯ ತನ್ನ ಸೊಗಡನ್ನು ಕಳೆದುಕೊಳ್ಳುತ್ತಿದೆ. ಕೈಗಾರಿಕೀಕರಣ ಮತ್ತು ಅಭಿವೃದ್ಧಿ ಸಂಪೂರ್ಣವಾಗಿ ಪಾಶ್ಚಿಮಾತ್ಯದಿಂದ ಎರವಲಾಗಿ ಪಡೆದ ವಿಷಯಗಳಾಗಿವೆ. ನಮ್ಮದು ಪೌರಾತ್ಯ ದೇಶ. ಮುಳುಗಿದ ಸೂರ್ಯ ಉದಯಿಸುವ ದೇಶ! ಉದಯಿಸುವ ಸೂರ್ಯನೊಂದಿಗೆ ಜೀವನೋತ್ಸಾಹ ಮೆರೆಯುವ ಸುಸಂಸ್ಕೃತಿಯ ದೇಶ. ಪಶ್ಚಿಮ ದೇಶಗಳಲ್ಲಿಯ ಜನರ ಜೀವನದಲ್ಲಿ ಏಕತಾನತೆಯಿದೆ. ಕುಟುಂಬಗಳು ಒಡೆದು ಹೋಗಿವೆ. ಯುವಕ ಯುವತಿಯರು ದಾರಿ ತಪ್ಪುತ್ತಿದ್ದಾರೆ. ಶೀಲ-ಅಶ್ಲೀಲಗಳ ಮಧ್ಯ ರೇಖೆ ತುಂಬ ತೆಳುವಾಗಿದೆ. ಆ ದೇಶಗಳಲ್ಲಿ ಬುದ್ಧಿಮಾಂದ್ಯರ ಸಂಖ್ಯೆಯೂ ಅಧಿಕವಾಗಿದೆ. ಕೈಗಾರಿಕೀಕರಣದಿಂದ ಪಾಶ್ಚಾತ್ಯರಲ್ಲಿ ಸಿರಿವಂತಿಕೆ ಇರಬಹುದು ಆದರೆ ಅವರ ಜೀವನದಲ್ಲಿ ಶಾಂತಿ ಮತ್ತು ನೆಮ್ಮದಿ ಇಲ್ಲವೆಂಬ ಕೊರಗು ಆ ದೇಶಗಳಲ್ಲಿ ರಚಿತವಾಗಿರುವ ಸಾಹಿತ್ಯದಿಂದ ಗೊತ್ತಾಗುತ್ತದೆ. ಆದ್ದರಿಂದ ಸೂರ್ಯ ಮುಳುಗುವ ಪಶ್ಚಿಮ ಸಂಸ್ಕೃತಿಗಿಂತ ಸೂರ್ಯ ಉದಯಿಸುವ ಪೂರ್ವ ಸಂಸ್ಕೃತಿ ನಮಗೆ ಇಷ್ಟವಾಗಬೇಕಲ್ಲವೇ?

ಅಶಾಂತಿಯ ಕುದಿತದಲ್ಲಿ ಜಗತ್ತು

– ಸುರೇಂದ್ರ ಕೌಲಗಿ

(ಒಂದು ಯುದ್ಧವನ್ನು ತಡೆಯಲು ಮಾಡಿದ ಯುದ್ಧ ಇನ್ನೊಂದು ಯುದ್ಧಕ್ಕೆ ಕಾರಣವಾಗುತ್ತದೆ.)

೨೦೧೬ನೇ ವರ್ಷ ಅಶಾಂತಿ, ಆತಂಕ, ಭೀತಿಗಳಿಗೆ ಕುಪ್ರಸಿದ್ಧ ವರ್ಷವಾಗುವುದರಲ್ಲಿ ಸಂದೇಹವಿಲ್ಲ. ಇದಕ್ಕೆ ಕಾರಣ ಜಗತ್ತಿನ ಎಲ್ಲ ಪ್ರಮುಖ ದೇಶಗಳು ಅತ್ಯಂತ ವಿನಾಶಕಾರಿ ಶಸ್ತ್ರಾಸ್ತ್ರಗಳನ್ನು ತಯಾರಿಸಿ ಸಂಗ್ರಹಮಾಡಿಕೊಳ್ಳುತ್ತಿರುವುದು. ಇದಲ್ಲದೆ ಭಾರತ ಮತ್ತು ಪಾಕ್ ಗಳ ನಡುವೆ; ಉತ್ತರ ಕೋರಿಯ ಮತ್ತು ದಕ್ಷಿಣ ಕೋರಿಯಾಗಳ ಮಧ್ಯೆ; ಉತ್ತರ ಕೋರಿಯ ಮತ್ತು ಅಮೇರಿಕಾದ ಮಧ್ಯೆ; ಅಮೇರಿಕ ಮತ್ತು ರಷ್ಯಾದ ಮಧ್ಯೆ; ಸೌದಿ ಅರೇಬಿಯಾ ಮತ್ತು ಇರಾನ್‌ಗಳ ಮಧ್ಯೆ; ಭಾರತ ಮತ್ತು ಚೀನಾ ದೇಶದ ಮಧ್ಯೆ ನಡೆಯುತ್ತಿರುವ ಶೀತ ಸಮರ ಮತ್ತು ಶಸ್ತ್ರಾಸ್ತ್ರಗಳ ಸಂಗ್ರಹ ಪೈಪೋಟಿ; ಉತ್ತರ ಕೋರಿಯ ತಯಾರಿಸಿರುವ ಜಲಜನಕ ಬಾಂಬ್; ಹವಾಮಾನದ ವೈಪರೀತ್ಯ ಮತ್ತು ಪರಿಸರ ವಿನಾಶ ಹಾಗೂ ತಾಪಮಾನ ಅತಿಯಾಗಿ ಏರುವ ಸಾಧ್ಯತೆ ಮುಂತಾದವುಗಳೆಲ್ಲ ಜಗತ್ತಿನಲ್ಲಿ ಅಶಾಂತಿ, ಆತಂಕ, ಭೀತಿಗಳನ್ನು ಸೃಷ್ಟಿಸಿವೆ. ಇದರಿಂದಾಗಿ ಜಗತ್ತು ಅಶಾಂತಿಯ ಕುದಿತದಲ್ಲಿ ಸಿಕ್ಕಿಹಾಕಿಕೊಂಡಿದೆ. ಮೇಲ್ಕಾಣಿಸಿದ ಕಾರಣಗಳಲ್ಲದೆ ಇಸ್ಲಾಮಿಕ್ ಸ್ಟೇಟ್, ತಾಲಿಬಾನ್, ಅಲ್ ಖೈದಾ ಮತ್ತು ವಿವಿಧ ಭಯೋತ್ಪಾದಕ ಸಂಘಟನೆಗಳ ಅಟ್ಟಹಾಸವೂ ಸೇರಿಕೊಂಡಿದೆ. ಇಸ್ಲಾಮಿಕ್ ಸ್ಟೇಟ್ ಸಂಘಟನೆ ಇಡೀ ಜಗತ್ತನ್ನೇ ಗೆದ್ದು ಎಲ್ಲೆಲ್ಲಿಯೂ ಇಸ್ಲಾಂ ಧರ್ಮದ ಸತ್ಯ ಮತ್ತು ನ್ಯಾಯವನ್ನು ಸ್ಥಾಪಿಸುವುದು ತನ್ನ ಗುರಿಯೆಂದು ಅದರ ಸ್ಥಾಪಕ ಬಕ್ರ ಅಲ್-ಬಗಾದಿ ಹೇಳಿದ್ದಾನೆ. ಇದರಿಂದಾಗಿ ಜಾಗತಿಕ ಧರ್ಮಗಳಲ್ಲಿ ಸಮರಸತೆ ಉಂಟಾಗುವ ಬದಲು ಸಂಘರ್ಷ ಉಂಟಾಗುವ ಸಾಧ್ಯತೆ ಹೆಚ್ಚುತ್ತದೆ. ಅಮೇರಿಕದಲ್ಲಿ ಸನಿಹ ಭವಿಷ್ಯದಲ್ಲಿ ನಡೆಯಲಿರುವ ಸಾರ್ವತ್ರಿಕ ಚುನಾವಣೆಯಲ್ಲಿ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿಯಾಗಿರುವ ಮತ್ತು ತಾನು ನಿಶ್ಚಿತವಾಗಿ ಅಮೇರಿಕದ ಅಧ್ಯಕ್ಷನಾಗುವೆ ಎಂದು ಬಹು ಆತ್ಮವಿಶ್ವಾಸದಿಂದ ಹೇಳುತ್ತಿರುವ ಡೊನಾಲ್ಡ್ ಟ್ರಂಪ್ ಅಮೇರಿಕವನ್ನು ಮುಸ್ಲಿಮರು ಪ್ರವೇಶಿಸದಂತೆ ನಿರ್ಬಂಧ ಹೇರಬೇಕೆಂದು ಹೇಳಿದ್ದಾರೆ. ಅವರ ಈ ಮಾತನ್ನು ರಿಪಬ್ಲಿಕನ್ ಪಕ್ಷದ ಶೇ ೬೭ರಷ್ಟು ಮತದಾರರು ಟ್ರಂಪ್ ಅವರ ಹೇಳಿಕೆಯನ್ನು ಸಮರ್ಥಿಸಿದ್ದಾರೆ. ಅಲ್ಲದೆ ಆಸ್ಟ್ರೇಲಿಯಾದ ಮಾಜಿ ಪ್ರಧಾನಿ ಟೋನಿ ಅಬ್ಬೋಟ ಕೂಡ ಸಮರ್ಥಿಸುತ್ತಾ ಪಶ್ಚಿಮ ದೇಶಗಳು

ಇಸ್ಲಾಂಗಿಂತ ತಮ್ಮ ಸಂಸ್ಕೃತಿ ಮೇಲೆಂಬುದನ್ನು ಸಾರಬೇಕೆಂದು ಹೇಳಿದ್ದಾರೆ. ಭಾರತದಲ್ಲೂ ಧಾರ್ಮಿಕ ಅಸಹಿಷ್ಣತೆ ಬೆಳೆಯುತ್ತಿದೆ. ಉತ್ತರಕೋರಿಯ ಜಲಜನಕ ಬಾಂಬನ್ನು ಪ್ರಯೋಗಿಸಿದ ಮೇಲಂತೂ ಜಗತ್ತಿನಲ್ಲಿ ಅಶಾಂತಿಯ ಭೀತಿ ಹೆಚ್ಚಾಗಿದೆ. ೨೦೧೬ನೇ ಸಾಲಿನ ಹೊಸ ವರ್ಷ ಜಲಜನಕ ಸ್ಫೋಟದ ಮೈನವಿರೇಳಿಸುವ ಸುದ್ದಿಯೊಂದಿಗೆ ಆರಂಭಗೊಳ್ಳಲಿ ಎಂಬ ಭಯೋತ್ಪಾದನೆಯ ಮಾತಿನೊಂದಿಗೆ ಉತ್ತರಕೋರಿಯ ಅಣ್ವಸ್ತ್ರಗಳನ್ನು ಹೊಂದಿದ ರಾಷ್ಟ್ರಗಳಲ್ಲಿ ಮಂಚೂಣಿ ಸ್ಥಾನಕ್ಕೆ ಬರಲು ಪ್ರಯತ್ನಿಸುತ್ತಿದೆ. ಈಗಾಗಲೇ ಐದು ಬಾರಿ ಅಣ್ವಸ್ತ್ರ ಪರೀಕ್ಷೆ ಮಾಡಿ ಈಗ ಜಲಜನಕ ಬಾಂಬ್ ಪ್ರಯೋಗಿಸಿದೆ. ತನ್ನ ಶಸ್ತ್ರಾಸ್ತ್ರ ಬಲವನ್ನು ವೈರಿ ದೇಶಗಳಾದ ಅಮೇರಿಕಾಕ್ಕೆ, ದಕ್ಷಿಣ ಕೋರಿಯಾಕ್ಕೆ ಹಾಗೂ ಜಪಾನ್ ಮುಂತಾದ ದೇಶಗಳಿಗೆ ತೋರಿಸಲು ಮುಂದಾಗಿದೆ. ಜಗತ್ತಿನ ಬಲಿಷ್ಠ ದೇಶವಾದ ಅಮೇರಿಕ ಹೆದರಿ, ತನ್ನ ರಕ್ಷಣೆಗಾಗಿ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಅದು ತಯಾರಿಸುತ್ತಿದೆ. ಅದು ತಯಾರಿಸುತ್ತಿರುವ ಸಣ್ಣ ಅಳತೆಯ ಬಾಂಬ್ ಕಾರಣದಿಂದಾಗಿ ಜಗತ್ತಿನೆಲ್ಲೆಡೆಯಲ್ಲ ಅಣು ಬಾಂಬುಗಳ ಭೀತಿ ಆವರಿಸಿದೆ. ಅಮೇರಿಕಾ ತನ್ನ ಶಸ್ತ್ರಾಗಾರದಲ್ಲಿ ಇರುವ ಹಳೆಯ ಬಾಂಬುಗಳಿಗೆ ಆಧುನಿಕ ತಂತ್ರಜ್ಞಾನದ ಅಳವಡಿಕೆಯೊಂದಿಗೆ ಹೆಚ್ಚು ಕರಾರುವಾಕ್ಕು ಮತ್ತು ಭೀಕರವಾದ ಬಾಂಬುಗಳನ್ನು ತಯಾರಿಸುತ್ತಿದೆ. ಸಿರಿಯಾ, ಟರ್ಕಿ, ಪಾಕಿಸ್ತಾನ, ಆಫ್ಘಾನಿಸ್ತಾನ ಮುಂತಾದ ದೇಶಗಳು ಇಸ್ಲಾಮಿಕ್ ಸ್ಟೇಟ್‌ನಂಥ ರಾಕ್ಷಸಿ ಸಂಘಟನೆಗೆ ಆಶ್ರಯಕೊಡುತ್ತಿವೆ. ಇಸ್ಲಾಮಿಕ್ ಸ್ಟೇಟ್‌ನ ಪ್ರಭಾವ ಜಾಗತಿಕವಾಗಿ ಹಬ್ಬುತ್ತಿದೆ. ಭಾರತದಂಥ ದೇಶದಲ್ಲಿಯೂ ಆ ಸಂಘಟನೆಯ ಪ್ರಭಾವ ಇದೆ. ಆ ಸಂಘಟನೆಗೆ ಭಾರತೀಯ ಯುವಕರೂ, ಅಮೇರಿಕಾದಲ್ಲಿಯ ಯುವಕರೂ ಸಹ ಸೇರಿಕೊಳ್ಳುತ್ತಿದ್ದಾರೆ ಎಂಬ ಆತಂಕಕಾರಿ ಸುದ್ದಿಗಳು ಬರುತ್ತಲೇ ಇರುತ್ತವೆ. ಜಗತ್ತಿನ ಎಲ್ಲ ದೇಶಗಳ ಸರ್ಕಾರಗಳ ಮುಖಂಡರು ಎಲ್ಲ ಭಯೋತ್ಪಾದಕ ಸಂಘಟನೆಗಳ ಕಾರ್ಯಚಟುವಟಿಕೆಗಳನ್ನು ಮತ್ತು ಭಯೋತ್ಪಾದಕತೆಯನ್ನು ಖಂಡಿಸುತ್ತಾವಾದರೂ ವಿಶ್ವರಾಷ್ಟ್ರ ಸಂಸ್ಥೆಯ ಮೂಲಕ ಅವುಗಳ ವಿರುದ್ಧ ಯಾವುದೇ ಪ್ರಕಾರದ ಪರಿಣಾಮಕಾರಿ ನಿಯಂತ್ರಣದ ಕ್ರಮಗಳನ್ನು ಕೈಗೊಳ್ಳಲು ವಿಫಲರಾಗಿದ್ದಾರೆ. ಒಬಾಮಾ ವರ್ಷವಿಡೀ ದಿನದ ೨೪ಘಂಟೆಗಳ ಕಾಲವೂ ಭಯೋತ್ಪಾದಕರ ಮತ್ತು ಇಸ್ಲಾಮಿಕ್ ಸ್ಟೇಟ್‌ಸಂಘಟನೆಯ ದಾಳಿಯ ಭೀತಿಯ ನೆರಳಿನಲ್ಲಿಯೇ ಆಡಳಿತ ನಡೆಸುತ್ತಿದ್ದಾರೆ. ಇಸ್ಲಾಮಿಕ್ ಸ್ಟೇಟ್‌ನಂಥ ಭಯೋತ್ಪಾದಕ ಸಂಘಟನೆಗಳನ್ನು ನಿರ್ನಾಮ ಮಾಡುವುದೇ ತಮ್ಮ ಗುರಿಯೆಂದು ಒಬಾಮ ಹೇಳುತ್ತಿದ್ದಾರೆ. ಅದೇ ರೀತಿ ಅಮೇರಿಕಾವನ್ನು ನಾಶಮಾಡುವುದೇ ತಮ್ಮ ಗುರಿಯೆಂದು ಆ ಸಂಘಟನೆಗಳು ಹೇಳುತ್ತಿವೆ. ಅಮೇರಿಕಾ ಈಗಾಗಲೇ ಡ್ರೋಣ್‌ಗಳ ಮೂಲಕ ವೈಮಾನಿಕದಾಳಿ ನಡೆಸುತ್ತ ಉಗ್ರರ ಹತ್ಯೆ ಮಾಡುತ್ತಿದೆ. ತನ್ನ ದೇಶದ ಬಗ್ಗೆ

ಅಪಪ್ರಚಾರ ನಿಲ್ಲಿಸದೇ ಹೋದರೆ ದಕ್ಷಿಣ ಕೋರಿಯಾದ ಮೇಲೆ ತಾನು ದಾಳಿಮಾಡುವುದಾಗಿ ಉತ್ತರಕೋರಿಯ ಘೋಷಿಸಿದೆ. ಉತ್ತರಕೋರಿಯಾದ ಈಗಿನ ಅಧ್ಯಕ್ಷ ಕಿಮ್ ಜಾಂಗ್ ಉನ್ ಅವರು ಸ್ವೇಚ್ಛೆಯ ಮನೋಧರ್ಮವುಳ್ಳವರು. ಆತ ಯಾವಾಗ ಏನು ಮಾಡುತ್ತಾರೆಂಬುದನ್ನು ಹೇಳಲಿಕ್ಕಾಗದು. ಹೀಗಾಗಿ ಹೆದರಿಕೆ ಇನ್ನೂ ಹೆಚ್ಚು. ಉತ್ತರಕೋರಿಯ ದುಷ್ಟ ರಾಷ್ಟ್ರ ಎಂದು ಆಗಲೇ ಅದು ಕೆಟ್ಟ ಹೆಸರು ಪಡೆದಿದೆ. ಪಾಕಿಸ್ತಾನವನ್ನು ಸಹ ಅಮೇರಿಕಾ ಅನೇಕ ಬಾರಿ ದುಷ್ಟ ದೇಶವೆಂದು ಕರೆದಿದೆ. ಚೀನಾದ ವಿಸ್ತಾರವಾದವನ್ನು ನೋಡಿದಾಗ ಮತ್ತು ಭಾರತದ ಹಿತಕ್ಕೆ ವಿರುದ್ಧವಾಗಿ ಪಾಕಿಸ್ತಾನದೊಂದಿಗೆ ಕೈಜೋಡಿಸಿ ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ ಅದು ಕೈಗೊಳ್ಳುತ್ತಿರುವ ಅಭಿವೃದ್ಧಿ ಯೋಜನೆಗಳನ್ನು ನೋಡಿದಾಗ ಹಾಗೂ ಶಾಂತಿಯ ಮಾತನ್ನು ಹೇಳುತ್ತಲೇ ಗಡಿ ಉಲ್ಲಂಘನೆ ಮಾಡುವ ಅದರ ವಿಚಿತ್ರ ಸ್ವಭಾವವನ್ನು ನೋಡಿದಾಗ ಚೀನಾ ಕೂಡ ಒಂದು ದುಷ್ಟ ರಾಷ್ಟ್ರವಾಗುತ್ತಿದೆ ಎಂಬ ಅನಿಸಿಕೆ ಮೂಡುತ್ತದೆ. ಹೀಗೆ ಜಗತ್ತಿನಲ್ಲಿ ದುಷ್ಟ ರಾಷ್ಟ್ರಗಳ ಸಂಖ್ಯೆ ಬೆಳೆಯುತ್ತಿರುವುದು ಕಾಣುತ್ತದೆ. ನೇಪಾಳ, ಶ್ರೀಲಂಕ, ಬಾಂಗ್ಲಾದೇಶ ಮುಂತಾದ ಚಿಕ್ಕ ದೇಶಗಳು ವ್ಯಗ್ರವಾಗುವುದನ್ನು ಕಂಡಾಗ ಭಯವಾಗುತ್ತದೆ. ಪಾಕಿಸ್ತಾನಕ್ಕೆ ಭಾರತ ದುಷ್ಟ ರಾಷ್ಟ್ರವೆನಿಸುತ್ತದೆ. ಭಾರತಕ್ಕೆ ಪಾಕಿಸ್ತಾನ ದುಷ್ಟರಾಷ್ಟ್ರವೆನಿಸುತ್ತದೆ. ಗಡಿ ವಿಷಯದಲ್ಲಿ ಪದೇ ಪದೇ ಉಲ್ಲಂಘನೆ ಮಾಡುತ್ತಿರುವ ಪಾಕ್ ಬಗ್ಗೆ ಭಾರತ ತನ್ನ ಸಹನೆ ಕಳೆದುಕೊಳ್ಳುತ್ತಿರುದಾಗಿ ದೇಶದ ರಕ್ಷಣಾ ಮಂತ್ರಿ ಮನೋಹರ್ ಪರಿಕ್ಕರ್ ಹೇಳಿದ್ದಾರೆ. ತನ್ಮೂಲಕ ಉಭಯ ರಾಷ್ಟಗಳ ಮಧ್ಯ ಸಮರ ಭೀತಿ ಹುಟ್ಟಿಸಿದ್ದಾರೆ. ಪ್ಯಾರಿಸ್ ಮೇಲೆ ದಾಳಿಮಾಡಿದ ನಂತರ ಇಸ್ಲಾಮಿಕ್ ಸ್ಟೇಟ್ ಫ್ರಾನ್ಸ್ ದೇಶದ ಕಡು ವೈರಿ ಸಂಘಟನೆಯಾಗಿದೆ. ಆ ಸಂಘಟನೆಗೆ ಫ್ರಾನ್ಸ್ ಕಡುವೈರಿಯಾಗಿದೆ. ಫ್ರಾನ್ಸ್ ದೇಶದ ಸಹಾಯಕ್ಕೆ ಬರುವ ಜರ್ಮನಿ ಕೂಡ ವೈರಿ ದೇಶಗಳ ಪಟ್ಟಿಯಲ್ಲಿ ಸೇರಿಕೊಳ್ಳುತ್ತದೆ. ಹೀಗೆ ಜಾಗತಿಕ ಮಟ್ಟದಲ್ಲಿ ರಾಷ್ಟ್ರರಾಷ್ಟ್ರಗಳಲ್ಲಿ ವೈರತ್ವ ಉಂಟಾಗುತ್ತಿದೆ. ಒಂದು ದೇಶಕ್ಕೆ ಇನ್ನೊಂದು ದೇಶ ದುಷ್ಟ ರಾಷ್ಟ್ರವಾಗುತ್ತಿದೆ. ಈ ದುಷ್ಟತನಕ್ಕೆ, ವೈರತ್ವಕ್ಕೆ ಮೂಲ ಕಾರಣ ಆವಿಷ್ಕಾರಗೊಂಡಿರುವ ಭಯಾನಕ ಶಸ್ತ್ರಾಸ್ತ್ರಗಳು ಮತ್ತು ಅವುಗಳ ಸಂಗ್ರಹ. ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಹೊಂದಿರುವ ಮತ್ತು ಸಂಗ್ರಹಮಾಡಿಕೊಂಡಿರುವ ದೇಶ ದುಷ್ಟವೂ ಮತ್ತು ಆಕ್ರಮಣಕಾರಿಯೂ ಆಗುತ್ತದೆ. ಆದ್ದರಿಂದ ಸದಾ ಮೂರನೇ ಮಹಾಯುದ್ಧದ ಭೀತಿಯಲ್ಲಿ ಜಗತ್ತು ಇರಬೇಕಾಗಿ ಬಂದಿದೆ. ಜಗತ್ತಿನ ಯಾವುದೇ ಭಾಗದಲ್ಲಿ ಎರಡು ದೇಶಗಳ ಮಧ್ಯ ಉಂಟಾಗುವ ಗಡಿವಿವಾದ, ಭೂ ಆಕ್ರಮಣ ವಿವಾದ, ಜನಾಂಗೀಯ ವಿವಾದ ಯುದ್ಧಕ್ಕೆ ಕಾರಣವಾಗುವ ಭೀತಿ ಜಗತ್ತನ್ನು ಕಾಡುತ್ತಿರುತ್ತದೆ. ಇತ್ತೀಚೆಗಿನ ಕಲಹದ ಒಂದು ಕಾರಣದಿಂದ ಸುನ್ನಿ ದೇಶವಾದ

ಸೌದಿ ಅರೇಬಿಯ ಶಿಯಾತ್ ದೇಶವಾದ ಇರಾನ್‌ನೊಂದಿಗೆ ತನ್ನ ರಾಜತಾಂತ್ರಿಕ ಸಂಬಂಧವನ್ನು ಕಡಿದುಕೊಂಡಿದೆ. ಮದ್ದಿನ ಮನೆಗೆ ಯಾರಿಂದ ಯಾವ ಕಾರಣಕ್ಕಾಗಿ ಕಿಡಿ ಬೀಳುವುದೊ ಗೊತ್ತಿಲ್ಲದ್ದಷ್ಟು ಸೂಕ್ಷ್ಮವಾಗಿದೆ ಇಂದಿನ ಜಾಗತಿಕ ರಾಜಕಾರಣ. ಒಂದೆಡೆ ಜಾಗತಿಕ ತಾಪಮಾನ ದಿನೇ ದಿನೇ ಹೆಚ್ಚಾಗುವಿಕೆ ಮತ್ತು ಇನ್ನೊಂದೆಡೆ ಜಾಗತಿಕ ರಾಜಕಾರಣದ ಅತೀ ಸೂಕ್ಷ್ಮವಾಗುವಿಕೆಯ ಕುದಿತದಲ್ಲಿ ಜಗತ್ತು ಸಿಲುಕಿದೆ. ಈಗಾಗಲೇ ಎರಡು ಮಹಾಯುದ್ಧಗಳನ್ನು ಜಗತ್ತು ಅನುಭವಿಸಿ ಬಹಳ ಸಂಕಟಪಟ್ಟಿದೆ. ಆದ್ದರಿಂದ ಮೂರನೇ ಮಹಾಯುದ್ಧದಿಂದ ತನ್ನನ್ನು ರಕ್ಷಿಸಿಕೊಳ್ಳಲು ಜಗತ್ತು ಎಲ್ಲ ಪ್ರಯತ್ನಮಾಡಬೇಕಾಗಿದೆ. ಈ ವಿಷಯದಲ್ಲಿ ವಿಶ್ವರಾಷ್ಟ್ರ ಸಂಸ್ಥೆಯ ಪಾತ್ರ ಬಹಳ ಮುಖ್ಯವಾಗಿದೆ. ಮೊದಲನೇ ಮಹಾಯುದ್ಧದ ಭೀಕರ ಪರಿಣಾಮ ಪುನಃ ಜಗತ್ತಿಗೆ ಬರದಿರಲಿ ಎಂಬ ಆಶಯದೊಂದಿಗೆ ಲೀಗ್ ಆಫ್ ನೇಷನ್ಸ್ ರಾಷ್ಟ್ರಗಳ ಒಕ್ಕೂಟದ ರಚನೆಯಾಯಿತು. ಆದರೆ ಅದಕ್ಕೆ ಎರಡನೇ ಮಹಾಯುದ್ಧವನ್ನು ತಪ್ಪಿಸಲಾಗಲಿಲ್ಲ. ಈಗ ಜಗತ್ತಿನ ಅನೇಕ ರಾಷ್ಟ್ರಗಳು ದೊಡ್ಡ ಸಂಖ್ಯೆಯಲ್ಲಿ ಅಣುಬಾಂಬು ಮತ್ತು ಸಂಕೀರ್ಣ ತಂತ್ರಜ್ಞಾನದಿಂದ ಕೂಡಿದ ಯುದ್ಧ ವಿಮಾನಗಳನ್ನು ಹೊಂದಿರುವಾಗ ಹಾಗೂ ರಾಷ್ಟ್ರ ರಾಷ್ಟ್ರಗಳ ಮಧ್ಯೆ ಅನೇಕ ವೈಮನಸ್ಸುಗಳು ಇರುವಾಗ ಮೂರನೇ ಮಹಾಯುದ್ಧ ಸಂಭವಿಸುವ ಚಿಹ್ನೆಗಳು ಆಗಾಗ್ಗೆ ಗೋಚರಿಸುತ್ತಲೇ ಇರುತ್ತವೆ. ಇಂತಹ ಭಯಾನಕ ಸ್ಥಿತಿಯಲ್ಲಿ ಈಗಿನ ವಿಶ್ವಸಂಸ್ಥೆಯ ಮೇಲೆ ಹಾಗೂ ಆ ಸಂಸ್ಥೆಯ ಭದ್ರತಾ ಸಮಿತಿಯ ಹದಿಮೂರು ಸದಸ್ಯ ಪ್ರಬಲ ರಾಷ್ಟ್ರಗಳ ಮೇಲೆ ಬಹುದೊಡ್ಡ ಜವಾಬ್ದಾರಿಯಿದೆ. ಜಾಗತಿಕ ತಾಪಮಾನವನ್ನು ಕಡಿಮೆಮಾಡುವ ಜವಾಬ್ದಾರಿಯೂ ಅದರಮೇಲಿದೆ. ಏಕೆಂದರೆ ಬರಲಿರುವ ವರ್ಷಗಳಲ್ಲಿ ಜಗತ್ತಿನಲ್ಲಿ ೧೧೦ರಿಂದ ೩೨೦ ಕೋಟಿ ಜನರು ಜಲಕ್ಷಾಮವನ್ನು ಎದುರಿಸಬೇಕಾಗುತ್ತದೆ. ೬೦ ಕೋಟಿಯಷ್ಟು ಜನರಿಗೆ ಹಸಿವಿನ ಸಮಸ್ಯೆಯಿಂದ ಕಂಗಾಲಾಗಬೇಕಾಗುತ್ತದೆ; ೭೦ಲಕ್ಷ ಜನರು ಸಮುದ್ರದ ಜಲಪ್ರವಾಹದೊಂದಿಗೆ ಹೋರಾಡಬೇಕಾಗುತ್ತದೆ; ಇಂಥವೆಲ್ಲ ಸಂಕಟಗಳ ಕಾರಣದಿಂದ ೨೦೫೦ರ ಹೊತ್ತಿಗೆ ೨೫ ಕೋಟಿ ಜನರು ಕ್ಷಾಮ, ಪ್ರವಾಹ ಮತ್ತು ಸುಂಟರಗಾಳಿಯಿಂದಾಗಿ ತಮ್ಮ ಊರುಗಳನ್ನು ಬಿಟ್ಟು ಹೋಗಬೇಕಾಗುತ್ತದೆ. ಎಲ್ಲ ಬಗೆಯ ಅಶಾಂತಿಗಳ ಕುದಿತದಲ್ಲಿರುವ ಜಗತ್ತನ್ನು ರಕ್ಷಿಸುವ ಶಕ್ತಿ ವಿಶ್ವರಾಷ್ಟ್ರ ಸಂಸ್ಥೆಗೆ ಬರಲಿ ಎಂದು ಜಗತ್ತಿನ ಪ್ರಜೆಗಳೆಲ್ಲರೂ ಹಾರೈಸೋಣ.

ಗಾಂಧೀಜಿಯನ್ನು ಜಗತ್ತಿಗೆ ಪರಿಚಯಿಸಿದ

ಲೂಯಿ ಫಿಶರ್

– ಡಾ.ಎನ್.ಜಗದೀಶ್ ಕೊಪ್ಪ

ಲೂಯಿಸ್ ಫಿಶರ್ ಇಪ್ಪತ್ತನೆಯ ಶತಮಾನದ ಜಗತ್ತು ಕಂಡ ಅತ್ಯುತ್ತಮ ಪತ್ರಕರ್ತ ಹಾಗೂ ರಾಜಕೀಯ ವಿಶ್ಲೇಷಕರಲ್ಲಿ ಪ್ರಮುಖನಾದವನು. ತಾನು ಸೇವೆ ಸಲ್ಲಿಸಿದ ರಾಷ್ಟ್ರಗಳ ರಾಜಕೀಯ ಹಾಗೂ ಸಾಮಾಜಿಕ ಸ್ಥಿತಿಗತಿಗಳನ್ನು ಕರಾರುವಕ್ಕಾಗಿ ವಿಶ್ಲೇಷಿಸಿ ಅವುಗಳ ಕುರಿತು ನಿರಂತರ ಲೇಖನ ಮತ್ತು ಕೃತಿಗಳನ್ನು ಬರೆಯುವುದರ ಮೂಲಕ ಪತ್ರಿಕಾ ವೃತ್ತಿಗೆ ಘನತೆ ತಂದಿತ್ತವನು. ನಿರಂತರ ಒಂದೂವರೆ ದಶಕಗಳ ಕಾಲ ಅಂದಿನ ಸೋವಿಯತ್ ರಷ್ಯಾದಲ್ಲಿ ಪತ್ರಕರ್ತನಾಗಿ ಸೇವೆ ಸಲ್ಲಿಸಿ, ಕಮ್ಯೂನಿಷ್ಟ್ ಸಿದ್ಧಾಂತಗಳನ್ನು ವಿಮರ್ಶೆಯ ಒರೆಗಲ್ಲಿಗೆ ಹಚ್ಚಿದವನು. ಜೊತೆಗೆ ಅವುಗಳ ಗುಣಾವಗುಣಗಳ ಕುರಿತು ಹಲವು ಕೃತಿಗಳನ್ನು ಬರೆದ ಲೂಯಿಸ್ ಫಿಶರ್, ಅಮೇರಿಕಾದಲ್ಲಿ ಸೋವಿಯತ್ ರಷ್ಯಾ ಕುರಿತು ಅಧಿಕೃತವಾಗಿ ಮಾತನಾಡಬಲ್ಲ ಏಕೈಕ ವಿದ್ವಾಂಸ ಎಂಬ ಗೌರವಕ್ಕೆ ಒಳಗಾದವನು. ಇವೆಲ್ಲವುಗಳಿಗಿಂತ ಹೆಚ್ಚಾಗಿ ಮಹಾತ್ಮಗಾಂಧೀಜಿಯವರ ಜೀವನ ಚರಿತ್ರೆಯನ್ನು ತಾನು ಬರೆದ ಕೃತಿಯಲ್ಲಿ ಗಾಂಧೀಜಿಯವರ ಉದಾತ್ತ ಚಿಂತನೆಗಳನ್ನು ಅಡಕಗೊಳಿಸುವುದರ ಮೂಲಕ ಗಾಂಧೀಜಿಯವರನ್ನು ಜಗತ್ತಿಗೆ ತಲುಪಿಸಿ ತಾನೂ ಸಹ ಅವರ ಜೊತೆ ಅಮರನಾದವನು.

ಮಹಾತ್ಮ ಗಾಂದಿಯವರು ತಾವು ಬದುಕಿದ್ದ ಆ ಕಾಲಘಟ್ಟದಲ್ಲಿ ಜಗತ್ತಿಗೇನು ಅಪರಿಚಿತರಾಗಿ ಉಳಿದಿರಲಿಲ್ಲ. ಆದರೆ, ಎಂದೂ ಮುಳುಗದ ಸಾಮ್ರಾಜ್ಯವೆಂಬ ಇಂಗ್ಲೆಂಡಿನ ಸರ್ಕಾರ ಮತ್ತು ಅರಸೊತ್ತಿಗೆಗೆ ಅಹಿಂಸೆಯ ಮಾರ್ಗದಲ್ಲಿ ಅವರು ಒಡ್ಡಿದ ಅನೇಕ ಸವಾಲುಗಳ ಮುಖಾಂತರ

ಅವರು ಜಗತ್ತಿಗೆ ಕುತೂಹಲಕಾರಿ ವ್ಯಕ್ತಿಯಾಗಿ ಹೊರಹೊಮ್ಮಿದ್ದರು. ಅಹಿಂಸೆ ಎಂಬ ಆಯುಧದ ಮೂಲಕ ಲಕ್ಷಾಂತರ ಮಂದಿ ಅನುಯಾಯಿಗಳ ಜೊತೆಗೂಡಿ ಇಂಗ್ಲೆಂಡ್‌ನ ಈಸ್ಟ್ ಇಂಡಿಯಾ ಕಂಪನಿ ಮತ್ತು ಸರ್ಕಾರಗಳನ್ನು ಅವರು ಮಣಿಸಿದ ರೀತಿಯಿಂದಾಗಿ ಅವರ ಕುರಿತು ಜಗತ್ತಿಗೆ ಅನೇಕ ರೀತಿಯ ಕುತೂಹಲಗಳಿದ್ದವು. ಅವರ ಹೋರಾಟ, ಬದ್ಧತೆ ಮತ್ತು ಬಲಿದಾನ ಹಾಗೂ ಚಿಂತನೆಗಳನ್ನು ಜಗತ್ತಿಗೆ ತಲುಪಿಸಿದ ಕೀರ್ತಿ ಲೂಯಿಸ್ ಫಿಶರ್ ಗೆ ಸಲ್ಲುತ್ತದೆ. ಈ ಕಾರಣಗಳಿಂದಾಗಿ ಲಂಡನ್ನಿನ ನಿಯತ ಕಾಲಿಕೆ "ಟೈಮ್ಸ್" ಪತ್ರಿಕೆಯು ಇಪ್ಪತ್ತನೆಯ ಶತಮಾನದ ಅತ್ಯಂತ ಪ್ರಭಾವಿ ವ್ಯಕ್ತಿಗಳ ಕುರಿತು ಜಗತ್ತಿನಾದ್ಯಂತ ನಡೆಸಿದ ಸಮೀಕ್ಷೆಯಲ್ಲಿ ಮಹಾತ್ಮ ಗಾಂಧಿಯವರಿಗೆ ದ್ವಿತೀಯ ಸ್ಥಾನ ಲಭ್ಯವಾಯಿತು. (ಮೊದಲ ಸ್ಥಾನ ಆಲ್ಬರ್ಟ್ ಐನ್‌ಸ್ಟಿನ್ ರವರಿಗೆ ದೊರೆತಿತ್ತು.) ತಾನು ಹುಟ್ಟಿ ಬೆಳೆದ ಅಮೇರಿಕಾದ ಬಂಡವಾಳಶಾಹಿ ನೀತಿಯ ವಿರುದ್ಧ ಒಂದು ರೀತಿಯ ಅಸಹನೆ ಬೆಳಸಿಕೊಂಡು ಕಮ್ಯೂನಿಷ್ಟ್ ಸಿದ್ಧಾಂತಗಳ ಪರಮ ಆರಾಧಕನಾಗಿದ್ದ ಲೂಯಿಸ್ ಫಿಶರ್ ಕೊನೆಗೆ ಅದರಿಂದಲೂ ಭ್ರಮನಿರಸನಗೊಂಡು ಅಂತಿಮವಾಗಿ ಗಾಂಧಿ ಸಿದ್ಧಾಂತಗಳು ಮತ್ತು ಚಿಂತನೆಗಳಿಗೆ ಒಲಿದದ್ದು ಒಂದು ರೀತಿಯಲ್ಲಿ ಆತನ ರೋಚಕ ಪಯಣ ಎಂದು ಬಣ್ಣಿಸ ಬಹುದು. ಅಮೇರಿಕಾದ ಪ್ರಿನ್ಸ್ ಟನ್ ವಿಶ್ವ ವಿದ್ಯಾನಿಲಯವು ಲೂಯಿ ಫಿಶರ್ ನ ಎಲ್ಲಾ ಕೃತಿಗಳು ಹಾಗೂ ಬರಹಗಳ ದಾಖಲೆಯನ್ನು ಸಂಗ್ರಹಿಸಿಟ್ಟಿದ್ದು ಇದರಿಂದಾಗಿ ಆತನನ್ನು ಅರಿಯಲು ನಮಗೆ ಸಹಾಯಕವಾಗಿದೆ.

ಲೂಯಿ ಫಿಶರ್ ೧೮೯೬ ರ ಫೆಬ್ರವರಿ ೨೯ ರಂದು ಅಮೇರಿಕಾದ ಕಡಲತೀರದ ನಗರ ಫಿಲಿಡೆಲ್ಫಿಯಾ ನಗರದ ಕೊಳಗೇರಿಯಲ್ಲಿ ಜನಿಸಿದವನು. ಆ ವೇಳೆಗೆ ಆತನ ತಂದೆ ಡೇವಿಡ್ ಮೀನು ಮತ್ತು ಹಣ್ಣುಗಳನ್ನು ಮನೆ ಮನೆಗೆ ತಿರುಗಿ ಮಾರಾಟ ಮಾಡುತ್ತಿದ್ದ ಕಡು ಬಡವನಾಗಿದ್ದ. ಸ್ಥಳಿಯ ಪಬ್ಲಿಕ್ ಶಾಲೆಯಲ್ಲಿ ಮೆಟ್ರಿಕ್ ವರೆಗೆ ಓದಿ ನಂತರ ಶಾಲೆಯೊಂದರ ಶಿಕ್ಷಕನಾಗಿದ್ದ ಲೂಯಿಸ್ ಫಿಶರ್‌ಗೆ ೧೯೧೭ ರಲ್ಲಿ ಬ್ರಿಟೀಷ್ ಸೇನೆಯ ಪರವಾಗಿ ಸ್ವಯಂ ಸೇವಾ ಕಾರ್ಯಕರ್ತನಾಗಿ ಸೇವೆ ಸಲ್ಲಿಸಲು ಪ್ಯಾಲೆಸ್ತೇನ್ ನಲ್ಲಿ ಅವಕಾಶ ದೊರೆಯಿತು. ಮೂರು ವರ್ಷ ಸೇವೆ ಸಲ್ಲಿಸಿದ ಲೂಯಿ ಫಿಶರ್ ನಂತರ ವಾಪಸ್ ನ್ಯೂಯಾರ್ಕ್ ನಗರಕ್ಕೆ ಬಂದು ಸ್ಥಳಿಯ ಸುದ್ಧಿ ಸಂಸ್ಥೆಯೊಂದರಲ್ಲಿ ವರದಿಗಾರನಾಗಿ ನೇಮಕಗೊಂಡ. ಇದೇ ವೇಳೆಗೆ ಸರಿಯಾಗಿ ರಷ್ಯಾದ ಸಂಗೀತಗಾರರ ತಂಡವೊಂದು ಅಮೇರಿಕಾ ಪ್ರವಾಸದಲ್ಲಿತ್ತು. ರಷ್ಯನ್ ಭಾಷೆಯೊಂದನ್ನು ಹೊರತು ಪಡಿಸಿ ಬೇರೊಂದು ಭಾಷೆಯ ಪರಿಚಯವಿಲ್ಲದ ಸಂಗೀತಗಾರರು ತಮ್ಮ ಜೊತೆಯಲ್ಲಿ ಇಂಗ್ಲೀಷ್ ಭಾಷೆಯನ್ನು ಬಲ್ಲವಳಾಗಿದ್ದ ಬೆರ್ಥಾ

ಅಲಿಯಾಸ್ ಮರ್ಕ್‌ರೂಶ ಎಂಬ ಯುವತಿಯನ್ನು ಜೊತೆಯಲ್ಲಿ ಕರೆತಂದಿದ್ದರು. ಆಕೆಗೆ ಸ್ಥಳಿಯ ಸಂಘ ಸಂಸ್ಥೆಗಳು ಮತ್ತು ಸರ್ಕಾರಗಳ ಜೊತೆ ಸಂಪರ್ಕ ಏರ್ಪಡಿಸಲು ಲೂಯಿಸ್ ಫಿಶರ್ ನೇಮಕಗೊಂಡ. ಹೀಗೆ ಒಂದು ವರ್ಷ ಕಾಲ ಅಮೇರಿಕಾದ ವಿವಿಧ ನಗರಗಳಿಗೆ ಬೇಟಿ ನೀಡಿದ ರಷ್ಯಾದ ಸಂಗೀತ ತಂಡದ ಜೊತೆ ತಿರುಗಾಡಿದ ಫಿಶರ್, ನಂತರ ರಷ್ಯಾ ತಂಡ ಜರ್ಮನಿಯತ್ತ ಪ್ರವಾಸ ಹೊರಟಾಗ, ಅದರ ಜೊತೆ ತಾನೂ ಪ್ರಯಾಣ ಬೆಳಸಿದ. ಬರ್ಲಿನ್ ನಗರದಲ್ಲಿದ್ದುಕೊಂಡು, ಅಮೇರಿಕಾದ ನ್ಯೂಯಾರ್ಕ್ ಪೋಸ್ಟ್ ಎಂಬ ಸಂಜೆ ದಿನಪತ್ರಿಕೆಗೆ ಯುರೂಫ್ ರಾಷ್ಟ್ರಗಳ ವರದಿಗಾರನಾಗಿ ನೇಮಕಗೊಂಡ. ಈ ಎರಡು ವರ್ಷದ ಅವಧಿಯಲ್ಲಿ ರಷ್ಯಾ ತಂಡದ ಯುವತಿಯ ಜೊತೆ ಅನುರಾಗ ಬೆಳಸಿಕೊಂಡಿದ್ದ ಫಿಶರ್ ಆಕೆಯನ್ನು ಬಿಟ್ಟಿರಲಾರದೆ, ೧೯೨೨ ರಲ್ಲಿ ತಾನೂ ಸಹ ರಷ್ಯಾಕ್ಕೆ ತೆರಳಿ ಆಕೆಯನ್ನು ವಿವಾಹವಾಗುವುದರ ಮೂಲಕ ಬದುಕು ಕಟ್ಟಿಕೊಂಡ. ಈ ಸಮಯದಲ್ಲಿ ಜಗತ್ತಿನ ಎರಡು ಬಲಿಷ್ಠ ರಾಷ್ಟ್ರಗಳಾಗಿ ಹೊರ ಹೊಮ್ಮಿದ್ದ ಹಾಗೂ ಒಳಗೊಳಗೆ ಶೀತಲ ಯುದ್ಧದಲ್ಲಿ ತೊಡಗಿದ್ದ ಅಮೇರಿಕಾ ಮತ್ತು ಸೋವಿಯತ್ ರಷ್ಯಾ ಈ ಎರಡೂ ರಾಷ್ಟ್ರಗಳು ಪರಸ್ಪರ ತಮ್ಮ ಶಕ್ತಿ ಸಾಮಾರ್ಥ್ಯಗಳನ್ನು ಅರಿತುಕೊಳ್ಳಲು ಪರೋಕ್ಷವಾಗಿ ಹಲವು ಮಾರ್ಗಗಳ ಮೂಲಕ ಯತ್ನಿಸುತ್ತಿದ್ದವು. ಇಂತಹ ಸಂದರ್ಭದಲ್ಲಿ ಅಮೇರಿಕಾ ಪ್ರಸಿದ್ಧ ನೇಷನ್ ಎಂಬ ದಿನಪತ್ರಿಕೆಗೆ ಲೂಯಿ ಫಿಷರ್ ಸೋವಿಯತ್ ರಷ್ಯಾದ ವಿಶೇಷ ವರದಿಗಾರನಾಗಿ ನೇಮಕಗೊಂಡ. ಜೊತೆಗೆ ಪ್ರತಿ ವರ್ಷ ತನ್ನ ತಾಯ್ನಾಡಾದ ಅಮೇರಿಕಾಕ್ಕೆ ತೆರಳಿ ಸೋವಿಯತ್ ರಷ್ಯಾ ಕುರಿತ ರಾಜಕೀಯ ಹಾಗೂ ಸಾಮಾಜಿಕ ವಿಷಯಗಳ ಕುರಿತು ವಿಶ್ವ ವಿದ್ಯಾಲಯಗಳಲ್ಲಿ ವಿಶೇಷ ಉಪನ್ಯಾಸ ನೀಡುತ್ತಿದ್ದ. ತಾನು ಹುಟ್ಟಿ ಬೆಳೆದ ಅಮೇರಿಕಾ ಸೇರಿದಂತೆ ಇಂಗ್ಲೇಂಡ್ ನಲ್ಲಿ ಪ್ರಚಲಿತದಲ್ಲಿದ್ದ ಬಂಡವಾಳಶಾಹಿ ನೀತಿಯ ಕುರಿತು ಅಸಹನೆ ಬೆಳಸಿಕೊಂಡಿದ್ದ ಫಿಶರ್ ೧೭೮೯ ರಲ್ಲಿ ನಡೆದ ಫ್ರೆಂಚ್ ಕ್ರಾಂತಿಯ ನಂತರ ಅನೇಕ ಬದಲಾವಣೆಗಳ ಮೂಲಕ ೧೮೪೮ ರಲ್ಲಿ ಕಾರ್ಲ್‌ಮಾರ್ಕ್ಸ್ ಮತ್ತು ಫ್ರೆಡರಿಕ್ ಏಂಗಲ್ಸ್ ಬರೆದ "ಕಮ್ಯೂನಿಷ್ಟ್ ಮ್ಯಾನಿಪೆಸ್ಟೋ" ಕೃತಿಯಿಂದ ಪ್ರಭಾವಿತನಾಗಿದ್ದ. ಮಾರ್ಕ್ಸ್ ವಾದದ ಪರಮ ಆರಾಧಕನಾಗಿದ್ದ.

ಮಾಸ್ಕೊ ನಗರದಲ್ಲಿ ಇದ್ದ ದಿನಗಳಲ್ಲಿ ಲೂಯಿ ಫಿಷರ್ ನ ಪತ್ನಿ ಮಾರ್ಕ್‌ರೂಶ ಉಕ್ರೇನ್ ಬಳಿ ಸ್ವಯಂ ಸೇವಾ ಸಂಘಟನೆಯೊಂದರಲ್ಲಿ ಕಾರ್ಯ ನಿರ್ವಹಿಸುತ್ತಿದ್ದಳು. ಒಂದು ದಿನ ಫಿಶರ್ ತನ್ನ ಪತ್ನಿಯ ಜೊತೆ ಉಕ್ರೇನ್ ಗೆ ತೆರಳಿ ಅಲ್ಲಿನ ಗ್ರಾಮಾಂತರ ಪ್ರದೇಶದ ರೈತರ ಮತ್ತು ಕೂಲಿ ಕಾರ್ಮಿಕರ ಬವಣೆಗಳನ್ನು ನೋಡಿ ಅಚ್ಚರಿಗೊಂಡ. ಕಮ್ಯೂನಿಷ್ಟ್ ಸಿದ್ಧಾಂತಗಳ ಕುರಿತು ಅವನು ಕಟ್ಟಿಕೊಂಡಿದ್ದ ಆತ್ಮ ವಿಶ್ವಾಸ ಅವನೊಳಗೆ

ಕರಗತೊಡಗಿತು. ಸ್ಟಾಲಿನ್ ಅಧಿಕಾರದ ಅವಧಿಯಲ್ಲಿ ಜಾರಿಗೆ ಬಂದ ಅನೇಕ ಕಠಿಣ ಕಾನೂನುಗಳು ಸರ್ವಾಧಿಕಾರವನ್ನು ನೆನಪಿಸುವಂತಿದ್ದವು. ಇದರಿಂದ ಭ್ರಮನಿರಸನಗೊಂಡ ಲೂಯಿಸ್ ಫಿಶರ್ ಸ್ಪೇನ್ ದೇಶದಲ್ಲಿ ನಡೆಯುತ್ತಿದ್ದ ಆಂತರೀಕ ಯುದ್ಧದ ಬಗ್ಗೆ ವರದಿ ಮಾಡಲು ೧೯೩೭ ರಲ್ಲಿ ಸ್ಪೇನ್ ದೇಶಕ್ಕೆ ತೆರಳಿದ. ೧೯೩೮ ರ ವೇಳೆಗೆ ಅವನಿಗೆ ರಷ್ಯಾ ಬೇಡವಾಗಿತ್ತು. ವಾಪಸ್ ನ್ಯೂಯಾರ್ಕ್‌ನಗರಕ್ಕೆ ಹೋಗಿ ತನ್ನ ಪತ್ನಿ ಮತ್ತು ಮಕ್ಕಳನ್ನು ಕರೆಸಿಕೊಳ್ಳಲು ಪ್ರಯತ್ನಿಸಿದ ಆದರೆ ದೇಶ ತೊರೆಯಲು ರಷ್ಯಾ ಸರ್ಕಾರ ಅಡ್ಡಗಾಲು ಹಾಕಿತು. ನಂತರ ಅಮೇರಿಕಾ ಅಧ್ಯಕ್ಷ ರೂಸ್ ವೆಲ್ಟ್ ರವರ ಮಧ್ಯ ಪ್ರವೇಶದಿಂದಾಗಿ ರಷ್ಯ ಸರ್ಕಾರ ೧೯೩೯ ರಲ್ಲಿ ಅನುಮತಿ ನೀಡಿತು. ಈ ವೇಳೆಗೆ ಕಮ್ಯೂನಿಷಮ್ ಹಾಗೂ ಬಂಡವಾಳ ಶಾಹಿ ನೀತಿ ಎರಡರ ಬಗ್ಗೆಯೂ ವಿಶ್ವಾಸ ಕಳೆದುಕೊಂಡಿದ್ದ ಲೂಯಿ ಫಿಷರ್ ಗೆ ಭಾರತದಲ್ಲಿ ಮಹಾತ್ಮ ಗಾಂಧಿ ನಡೆಸುತ್ತಿದ್ದ ಅಹಿಂಸಾ ಮಾರ್ಗದ ಹೋರಾಟ ಮತ್ತು ಅವರು ೧೯೦೮ ರಲ್ಲಿ ಬರೆದು, ಆನಂತರ ಮಹದೇವ ದೇಸಾಯಿರವರಿಂದ ಇಂಗ್ಲೀಷ್ ಭಾಷೆಗೆ ಅನುವಾದಗೊಂಡಿದ್ದ "ಹಿಂದ್ ಸ್ವಾರಾಜ್" ಕೃತಿಯ ಕುರಿತು ಆಸಕ್ತಿ ತಾಳಿದ್ದ. ಇವುಗಳ ನಡುವೆ ನ್ಯೂಯಾರ್ಕ್ ನಗರದಲ್ಲಿದ್ದುಕೊಂಡು, ಗಾಂಧೀಜಿಯವರ ಜೊತೆ ಪತ್ರ ವ್ಯವಹಾರ ಇಟ್ಟುಕೊಂಡು ಅನೇಕ ವಿಷಯಗಳ ಕುರಿತಂತೆ ತನ್ನೊಳಗಿದ್ದ ಸಂದೇಹಗಳನ್ನು ಪರಿಹಾರ ಮಾಡಿಕೊಳ್ಳುತ್ತಿದ್ದ. ಅಂತಿಮವಾಗಿ ೧೯೪೨ ರಲ್ಲಿ ಗಾಂಧೀಜಿಯವರ ಆಮಂತ್ರಣದ ಮೇರೆಗೆ ಸೇವಾಗ್ರಾಮ್ ಆಶ್ರಮಕ್ಕೆ ಬೇಟಿ ನೀಡಿದ ಲೂಯಿಸ್ ಫಿಶರ್ ಗೆ ಭಾರತದ ಬಹು ಮುಖಿ ಸಂಸ್ಕೃತಿ, ಇಲ್ಲಿನ ಜನರ ಬಡತನ ಮತ್ತು ಅನಕ್ಷರತೆ ಹಾಗೂ ತಾನು ಈವರೆಗೆ ಕಾಣದಿದ್ದ ಪೂರ್ವ ಜಗತ್ತಿನ ಇನ್ನೊಂದು ಮಗ್ಗುಲನ್ನು ಪರಿಚಯಿಸಿತ್ತು. ಬಡತನದ ನಡೆವೆ ಇಲ್ಲಿನ ಜನತೆ ಕಟ್ಟಿಕೊಂಡಿದ್ದ ಬದುಕು ಹಾಗೂ ಅವರ ಸಹಿಷ್ಣುತೆಯನ್ನು ಕಂಡು ಲೂಯಿಸ್ ಫಿಶರ್ ಅಚ್ಚರಿಗೊಂಡ. ಇಂತಹವರ ನಡುವೆ ಬದುಕುತ್ತಾ ಅವರ ಕಗ್ಗತ್ತಲ ಬದುಕಿಗೆ ಬೆಳಕಾಗಲು ಹೊರಟ ಗಾಂಧೀಜಿಯವರ ಬದುಕು, ಗ್ರಾಮ ಸ್ವರಾಜ್ಯದ ಪರಿಕಲ್ಪನೆಗಳು ಮತ್ತು ಯಂತ್ರ ನಾಗರೀಕತೆಗೆ ಪರ್ಯಾಯವಾಗಿ ಅವರು ರೂಪಿಸುತ್ತಿದ್ದ ಗುಡಿ ಕೈಗಾರಿಕೆಗಳ ಪ್ರಯತ್ನ ಇವೆಲ್ಲವೂ ಲೂಯಿ ಫಿಶರ್ ನ ಚಿಂತನಾ ಕ್ರಮವನ್ನು ಬದಲಾಯಿಸಿ ಬಿಟ್ಟವು. ತನ್ನ ಒಂದು ವಾರದ ಭಾರತದ ಪ್ರವಾಸದ ಅನುಭವವನ್ನು ಲೂಯಿಸ್ ಫಿಶರ್ ತನ್ನ "A Week With Gandhi" ಎಂಬ ಪುಟ್ಟ ಕೃತಿಯಲ್ಲಿ ತುಂಬಾ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾನೆ.

ಒಂದು ವಾರ ಕಾಲ ಸೇವಾ ಗ್ರಾಮದಲ್ಲಿ ಉಳಿದುಕೊಂಡು ಅಲ್ಲಿನ

ಗಾಂಧೀಜಿಯವರ ದಿನಚರಿ ಹಾಗೂ ಅವರ ಅನುಯಾಯಿಗಳ ಕಾರ್ಯವೈಖರಿಯನ್ನು ಮನಮುಟ್ಟುವಂತೆ ವಿವರಿಸಿದ್ದಾನೆ. ಬಿದರಿನ ತಡಿಕೆಗಳಿಗೆ ಮಣ್ಣು ಬಳಿದು ಅವುಗಳನ್ನು ಗೋಡೆಗಳನ್ನಾಗಿ ಪರಿವರ್ತಿಸಿಕೊಂಡು, ನಿರ್ಮಿಸಿದ ಸರಳ ಹಾಗೂ ಸ್ವಚ್ಛತೆಯಿಂದ ಕೂಡಿದ್ದ ಕುಟಿರ ಗಳೆಂಬ ಮನೆಗಳು, ಪ್ರತಿ ದಿನ ಬೆಳಿಗ್ಗೆ ಮತ್ತು ಸಂಜೆ ನಡೆಯುತ್ತಿದ್ದ ಪ್ರಾರ್ಥನೆ ಹಾಗೂ ಚರಕದಿಂದ ನೂಲು ನೇಯುವ ಕಾಯಕ, ಸಾಮೂಹಿಕ ಭೋಜನಾಲಯ ಇವೆಗಳ ಕಾರ್ಯಚಟುವಟಿಕೆಗಳನ್ನು ಮತ್ತು ಕಾರ್ಯಕರ್ತರೇ ಸ್ವತಃ ಶೌಚಾಲಯಗಳನ್ನು ಸ್ವಚ್ಛಗೊಳಿಸುವ ಕ್ರಿಯೆ, ಕೈ ತೋಟಗಳ ನಿರ್ವಹಣೆ ಇವುಗಳನ್ನು ಬಣ್ಣಿಸುತ್ತಾ, ಮನುಷ್ಯ ಪ್ರಯತ್ನ ಪಟ್ಟರೆ ಹೇಗೆ ಸ್ವಾವಲಂಬಿಯಾಗಿ ಬದುಕ ಬಹುದು ಎಂಬುದಕ್ಕೆ ಸೇವಾಗ್ರಾಮದ ಚಟುವಟಿಕೆಗಳು ಸಾಕ್ಷಿ ಎಂದು ಲೂಯಿಸ್ ಫೀಶರ್ ದಾಖಲಿಸಿದ್ದಾನೆ. ಚರಕದಿಂದ ನೂಲು ನೇಯುವುದು ನನ್ನ ದೃಷ್ಟಿಯಲ್ಲಿ ಅದೊಂದು ಕ್ರಿಯೆ ಎಂದು ಕಾಣದೆ, ಧ್ಯಾನ ಎಂಬಂತೆ ತೋರಿತು ಎಂದು ಅಭಿಪ್ರಾಯ ಪಟ್ಟಿದ್ದಾನೆ. ಬೆಳಿಗ್ಗೆ ಮತ್ತು ಸಂಜೆ ಗಾಂಧೀಜಿಯವರ ಜೊತೆ ಅವರ ನಡಿಗೆ ವ್ಯಾಯಾಮದ ಜೊತೆಯಲ್ಲಿ ಹೆಜ್ಜೆ ಹಾಕುತ್ತಾ, ಜಾಗತಿಕ ವಿದ್ಯಾಮಾನಗಳ ಚರ್ಚಿಸುತ್ತಾ, ಭಾರತದಲ್ಲಿ ನಡೆಯುತ್ತಿದ್ದ ಸ್ವಾತಂತ್ರ್ಯ ಹೋರಾಟದ ವಿವರಗಳನ್ನು ಹಾಗೂ ಗಾಂಧೀಜಿಯವರ ಧ್ಯೇಯಗಳನ್ನು ಅವನಿಗೆ ಅರಿಯಲು ಸಾಧ್ಯವಾಯಿತು.

ಲೂಯಿಸ್ ಫಿಶರ್ ಬಹಳ ವರ್ಷಗಳ ಕಾಲ ರಷ್ಯಾದಲ್ಲಿ ಇದ್ದ ಕಾರಣ, ಒಂದು ದಿನ ಗಾಂಧೀಜಿಯವರು " ಸ್ಟಾಲಿನ್ ಸರ್ವಾಧಿಕಾರಿ ಮನೋಭಾವದ ವ್ಯಕ್ತಿಯೆ? ಎಂದು ಪ್ರಶ್ನಿಸಿದರು. ಇದಕ್ಕೆ "ಹೌದು ಆತ ನಿಜಕ್ಕೂ ಸರ್ವಾಧಿಕಾರಿ" ಎಂದು ಫಿಶರ್ ಉತ್ತರಿಸಿದಾಗ ಗಾಂಧಿಜಿಯವರು ತಕ್ಷಣ "ಹಿಟ್ಲರ್‌ಗಿಂತ ಕೆಟ್ಟವನು ಎಂದು ನಿಮ್ಮ ಅಭಿಪ್ರಾಯವೆ?" ಎಂದು ಮರು ಪ್ರಶ್ನೆ ಹಾಕುತ್ತಾರೆ. ಈ ಸಂದರ್ಭದಲ್ಲಿ " ನನಗೆ ಹಿಟ್ಲರ್ ಮತ್ತು ಸ್ಟಾಲಿನ್" ನಡುವೆ ಅಂತಹ ವೆತ್ಯಾಸಗಳು ಕಾಣುತ್ತಿಲ್ಲ" ಎಂದು ಖಡಕ್ಕಾಗಿ ಫಿಶರ್ ಉತ್ತರಿಸುತ್ತಾನೆ. ಲೂಯಿಸ್ ಫಿಶರ್ ಗಾಂಧಿಜಿಯವರಲ್ಲಿ ಕಂಡ ಕೆಲವು ಗುಣಗಳನ್ನು ತನ್ನ ಕೃತಿಯಲ್ಲಿ ಮನಮುಟ್ಟುವಂತೆ ವಿವರಿಸಿದ್ದಾನೆ. ದೇಶದ ಸ್ವಾತಂತ್ರ್ಯ ಚಳುವಳಿಯಲ್ಲಿ ಇದ್ದುಕೊಂಡು, ನೂರಾರು ನಾಯಕರು, ಲಕ್ಷಾಂತರ ಅನುಯಾಯಿಗಳಿಗೆ ಮಾರ್ಗದರ್ಶನ ನೀಡುವ ಒತ್ತಡ ಹಾಗೂ ದೇಶ ವಿದೇಶಗಳಿಂದ ಬರುತ್ತಿದ್ದ ಪತ್ರಗಳಿಗೆ ಉತ್ತರ ನೀಡುವ ವೈಖರಿಗೆ ಅಚ್ಚರಿಗೊಂಡಿದ್ದಾನೆ. ಬಿಡುವಿಲ್ಲದ ಕಾರ್ಯಕ್ರಮಗಳ ನಡುವೆ ತನ್ನ ಆಶ್ರಮಕ್ಕೆ ಬರುತ್ತಿದ್ದ ಅತಿಥಿಗಳ ಯೋಗಕ್ಷೇಮ ವಿಚಾರಿಸುವವ ಅವರ ಪ್ರೀತಿ ಹಾಗೂ ವಿದೇಶಿ ಪ್ರಜೆಗಳ ಆಹಾರ ಸಂಸ್ಕೃತಿಯ ಕುರಿತು ಅಪಾರ ತಿಳುವಳಿಕೆಯಿದ್ದ ಅವರು ಅತಿಥಿಗಳಿಗಾಗಿ ತಾವೇ ಸ್ವತಃ ನಿಂತು

ಸಸ್ಯಹಾರ ಆಹಾರಗಳನ್ನು ಸಿದ್ಧ ಪಡಿಸಿ, ಬಡಿಸುತ್ತಿದ್ದ ಪರಿ ಇವೆಲ್ಲವನ್ನೂ ವಿವರಿಸಿರುವ ಫಿಶರ್, ಗಾಂಧಿಜಿಯವರಲ್ಲಿ ಕೇವಲ ನಾಯಕತ್ವ ಗುಣ ಮಾತ್ರ ಇರದೆ, ಅವರೊಳಗೆ ಒಬ್ಬ ಮಾತ್ರ ಹೃದಯದ ತಾಯಿ ಕೂಡ ಇದ್ದಳು ಎಂದು ಅಭಿಪ್ರಾಯ ಪಡುತ್ತಾನೆ.

ವಿದ್ಯುತ್ ಇಲ್ಲದ ಆ ಕಾಲದಲ್ಲಿ ಮಧ್ಯ ಭಾರತದಲ್ಲಿ ಅಲ್ಲಿನ ೪೦ ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶವನ್ನು ತಡೆದುಕೊಳ್ಳುವುದು ನಿಜಕ್ಕೂ ಸಾಹಸದ ಕೆಲಸ. ಈ ಪ್ರದೇಶವನ್ನು ಏಕೆ ಆಯ್ಕೆ ಮಾಡಿಕೊಂಡಿರಿ? ಎಂಬ ಅವನ ಪ್ರಶ್ನೆಗೆ ಗಾಂಧಿಯವರು " ಭಾರತದಲ್ಲಿ ಅತ್ಯಂತ ಹಿಂದುಳಿದ ಈ ಪ್ರದೇಶವನ್ನು ನನಗಾಗಿ ಮೆಡಲಿನ್ ಸ್ಲೇಡ್ (ಮೀರಾ ಬೆಹನ್) ಆಯ್ಕೆ ಮಾಡಿದಳು. ಇದರಿಂದಾಗಿ ನನಗೆ ನಿಜ ಭಾರತದ ದರ್ಶನವಾಯಿತು" ಎಂದು ಉತ್ತರಿಸಿರುವುದನ್ನೂ ಸಹ ಕೃತಿಯಲ್ಲಿ ದಾಖಲಿಸಿದ್ದಾನೆ. ಗ್ರಾಮೀಣ ಭಾರತದ ಸಂಸ್ಕೃತಿಯಾದ ನೆಲದ ಮೇಲೆ ಕಾಲು ಮಡಚಿ ಕೂರುವ ಅಭ್ಯಾಸ ನನಗಿರಲಿಲ್ಲ. ಹಾಗಾಗಿ ಬಾಪುರವರು ನನಗಾಗಿ ಕುರ್ಚಿಯೊಂದನ್ನು ತರಿಸಿ ಅದರ ಮೇಲೆ ಕೂರುವಂತೆ ವಿನಂತಿಸಿಕೊಳ್ಳುತ್ತಿದ್ದರು. ಆದರೆ ಅಂತಹ ಮಹಾನ್ ವ್ಯಕ್ತಿಯ ಎದುರು ಕುರ್ಚಿಯ ಮೇಲೆ ಕೂರುವುದು ಗೌರವವಲ್ಲ ಎಂಬುವುದು ನನ್ನ ಖಚಿತ ನಿಲುವಾಗಿತ್ತು. ಬಹಳ ಕಷ್ಟದಿಂದ ಅವರ ಬಳಿ ಕಾಲು ಮಡಚಿ ಕೂರುತ್ತಿದ್ದೆ. ಎಂದಿರುವ ಫಿಶರ್, ಗಾಂಧೀಜಿಯವರ ಜೊತೆ ಸಹ ಭೋಜನದಲ್ಲಿ ಪಾಲ್ಗೊಂಡು, ಅಲ್ಲಿನ ಪದ್ಧತಿಯನ್ನು ತುಂಬು ಹೃದಯದಿಂದ ಬಣ್ಣಿಸಿದ್ದಾನೆ. ತಟ್ಟೆಗೆ ಊಟ ಬಡಿಸಿದ ನಂತರ ಸಾಮೂಹಿಕ ಪ್ರಾರ್ಥನೆ ಸಲ್ಲಿಸುವುದನ್ನು ನೋಡಿದ ಫಿಶರ್, ' ಅನ್ನಕ್ಕೆ ಆಧ್ಯಾತ್ಮದ ನಂಟು ಬೆಸೆದು ಆಹಾರದ ಮಹತ್ವವನ್ನು ಅರಿಯುವುದರ ಜೊತೆಗೆ ಹಸಿವು ಕುರಿತಂತೆ ಕಾರ್ಯಕರ್ತರಲ್ಲಿ ಅವರು ಮೂಡಿಸುತ್ತಿದ್ದ ಪ್ರಜ್ಞೆಯನ್ನು ನೋಡಿ ನನಗೆ ವಿಸ್ಮಯವಾಯಿತು" ಎಂದಿದ್ದಾನೆ. ಈ ಒಂದು ವಾರದ ಬೇಟಿಯ ನಂತರ ಗಾಂಧೀಜಿಯ ಪ್ರಭಾವಕ್ಕೆ ಒಳಗಾದ ಲೂಯಿ ಫಿಶರ್ ಆನಂತರ ದಿನಗಳನ್ನು ಹಲವಾರು ಬಾರಿ ಭಾರತಕ್ಕೆ ಬೇಟಿ ಮಾಡಿ ಗಾಂಧಿಜಿಯನ್ನು ಮತ್ತು ಭಾರತವನ್ನು ಸಮಗ್ರವಾಗಿ ಅರಿಯವ ಪ್ರಯತ್ನ ಮಾಡಿದ.

೧೯೪೬ ರಲ್ಲಿ ಗಾಂಧೀಜಿಯವರು ಮಹಾರಾಷ್ಟ್ರದ ಪೂನಾ ಸಮೀಪದ ಪಂಚಾಗ್ನಿ ಎಂಬ ಗಿರಿಧಾಮದಲ್ಲಿ ವಿಶ್ರಾಂತಿಗಾಗಿ ಉಳಿದುಕೊಂಡಿದ್ದ ಸಮಯದಲ್ಲಿ ಮತ್ತೊಮ್ಮೆ ಗಾಂಧಿಯವರ ಜೊತೆ ಆರು ದಿನಗಳ ಕಾಲ ಉಳಿದು ಅವರ ಚಿಂತನೆಗಳನ್ನು ಅರ್ಥ ಮಾಡಿಕೊಳ್ಳಲು ಯತ್ನಿಸಿದ್ದ. ಇದು ಆತನ ಪಾಲಿಗೆ ಗಾಂಧಿಜಿಯವರ ಕೊನೆಯ ಬೇಟಿಯಾಯಿತು. ನಂತರದ ದಿನಗಳಲ್ಲಿ ಅವರಿಂದ ಪ್ರಭಾವಿತನಾದ ಲೂಯಿಸ್ ಫಿಶರ್ ಗಾಂಧೀಜಿ ಕುರಿತಂತೆ ಅವರ ಸಮಗ್ರ ಬರೆವಣಿಗೆಯನ್ನು ವಿಶೇಷವಾಗಿ

ಯಂಗ್ ಇಂಡಿಯ ಪತ್ರಿಕೆಯಲ್ಲಿ ಬಂದಿದ್ದ ಲೇಖನಗಳನ್ನು ಅಧ್ಯಯನ ಮಾಡಿದ. ಇದರ ಪರಿಣಾಮ ಅವನಿಗೆ ಸ್ಟಾಲಿನ್, ಲೆನಿನ್ ಮತ್ತು ಗಾಂಧೀಜಿಯವರ ನಡುವೆ ಇದ್ದ ಚಿಂತನೆಯ ಮಾದರಿಗಳನ್ನು ಗ್ರಹಿಸಲು ಸಾಧ್ಯವಾಯಿತು.

ನಾವಿನ್ನೂ ಗಾಂಧೀಜಿಯವರನ್ನು ಅವರ ಬದುಕಿನಲ್ಲಿ ಆಗಿರುವ ಎರಡು ಪ್ರಮಾದಗಳಿಗೆ (ಪೂನಾ ಒಪ್ಪಂಧ ಕುರಿತು ತಾಳಿದ ನಿಲುವು ಹಾಗೂ ತನ್ನ ಬ್ರಹ್ಮ ಚರ್ಯೆ ಕುರಿತು ಮಾಡಿಕೊಂಡ ಪರೀಕ್ಷೆ) ಇವುಗಳಿಗೆ ನೇಣು ಹಾಕಿ, ಅವರ ಸಂಪೂರ್ಣ ವ್ಯಕ್ತಿತ್ವವನ್ನು ಅರಿಯಲು ತಿಣುಕಾಡುತ್ತಿರುವಾಗ; ಪಾಶ್ಚಿಮಾತ್ಯ ಜಗತ್ತಿನ ವಿದ್ವಾಂಸರು ವಿಶೇಷವಾಗಿ ಅಮೇರಿಕಾದ ಲೂಯಿಸ್ ಫಿಶರ್, ಇಂಗ್ಲೆಂಡಿನ ರೋನಾಲ್ಡ್ ಡಂಕನ್ ಹಾಗೂ ಆಸ್ಟ್ರೇಲಿಯಾದ ಥಾಮಸ್ ವೆಬರ್ ಇವರುಗಳು ಗಾಂಧಿಯವರ ಚಿಂತನೆ ಮತ್ತು ವ್ಯಕ್ತಿತ್ವವನ್ನು ಉದಾರ ನೆಲೆಯಲ್ಲಿ ಗ್ರಹಿಸಿ ವ್ಯಾಖ್ಯಾನಿಸಿರುವುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. "ಒಂದು ಸಾಮಾಜ್ರ್ಯವನ್ನು ಮಣಿಸಲು ಮದ್ದು, ಗುಂಡು, ಪಿರಂಗಿ ಅವಶ್ಯಕ ಎಂದು ನಂಬಿಕೊಂಡಿದ್ದ ಪಶ್ಚಿಮದ ಜಗತ್ತಿಗೆ ಅವುಗಳಿಗಿಂತ ಅಹಿಂಸೆ ಎನ್ನುವುದು ಪರಿಣಾಮಕಾರಿಯಾದ ಅಸ್ತ್ರ ಎಂದು ತೋರಿಸಿಕೊಟ್ಟವರು ಈ ಮಹಾತ್ಮ" ಎಂದು ಗಾಂಧೀಜಿಯನ್ನು ಬಣ್ಣಿಸಿರುವ ಪರಿಯನ್ನು ಗಮನಿಸಿದರೆ, ಇದಕ್ಕಿಂತ ಪರಿಣಾಮಕಾರಿಯಾಗಿ ನಾವು ಗಾಂಧೀಜಿಯನ್ನು ಶಬ್ಧಗಳಲ್ಲಿ ಹಿಡಿದಿಡಲು ಸಾಧ್ಯವೆ? ಎಂಬ ಪ್ರಶ್ನೆ ಮನದಲ್ಲಿ ಮೂಡುತ್ತದೆ.

ಇಂತಹ ಒಂದು ಕಾರಣದಿಂದಾಗಿ ಲೂಯಿಸ್ ಫಿಶರ್ ೧೯೪೯ ರಲ್ಲಿ ತನ್ನ ಐವರು ಸಮಾನ ಮನಸ್ಕ ಗೆಳೆಯರ ಜೊತೆಗೂಡಿ ಕಮ್ಯೂನಿಷ್ಟ್ ಸಿದ್ಧಾಂತಗಳ ವೈಫಲ್ಯ ಕುರಿತು "A God That Failed" ಎನ್ನುವ ಕೃತಿಯನ್ನು ಬರೆದ. ನಂತರ ಗಾಂಧೀಜಿಯವರ ಹತ್ಯೆಯಾದ ಮೇಲೆ ಲೂಯಿಸ್ ಫಿಶರ್ ೧೯೫೦ ರಲ್ಲಿ "The Life Of Mahatma Gandhi" ಎನ್ನುವ ಕೃತಿಯನ್ನು ಬರೆದ. ಈ ಕೃತಿಯು ಜಗತ್ತಿನಾದ್ಯಂತ ಪ್ರಸಿದ್ಧಿ ಪಡೆದು ನೂರಾರು ಮುದ್ರಣ ಕಂಡಿತು. ೧೯೮೧ ರಲ್ಲಿ ಇಂಗ್ಲೆಂಡಿನ ರಿಚರ್ಡ್ ಆಟನ್ ಬರೋ ಗಾಂಧಿ ಕುರಿತು ಸಿನಿಮಾ ನಿರ್ಮಾಣ ಮಾಡುವಾಗ ಲೂಯಿಸ್ ಫಿಶರ್ ನ ಕೃತಿಯನ್ನು ಆಧಾರವನ್ನಾಗಿ ಇಟ್ಟುಕೊಂಡು ಚಿತ್ರ ಕಥೆಯನ್ನು ಸಿದ್ಧಪಡಿಸಿ ಚಿತ್ರ ನಿರ್ಮಾಣ ಮಾಡಿದ. ಈ ಸಿನಿಮಾ ಕೂಡ ಲೂಯಿ ಫಿಷರ್ ತನ್ನ ಕೃತಿಯ ಮೂಲಕ ಜಗತ್ತಿನ ಮೇಲೆ ಬೀರಿದ್ದ ಪ್ರಭಾವದಷ್ಟೇ ಪರಿಣಾಮವನ್ನು ಬೀರಿತು.

ಗಾಂಧೀಜಿಯ ಕೃತಿಯ ನಂತರ ತನ್ನ ಪತ್ರಿಕೋದ್ಯಮ ಬದುಕಿಗೆ ತಿಲಾಂಜಲಿ ಇತ್ತು ಸಂಪೂರ್ಣ ಬರೆವಣಿಗೆ ಮತ್ತು ಉಪನ್ಯಾಸಗಳಿಗೆ ಒಲಿದ ಲೂಯಿಸ್ ಫಿಶರ್,

ತನ್ನ ಪತ್ನಿಯ ಮೂಲಕ ರಷ್ಯಾ ಬದುಕಿನ ಅನುಭವ ಕುರಿತು ಎರಡು ಕಾದಂಬರಿಯನ್ನು ಬರೆಸಿದ. ಜೊತೆಗೆ ೧೯೫೨ ರಲ್ಲಿ ಸ್ಟಾಲಿನ್ ಕುರಿತು ಹಾಗೂ ೧೯೬೪ ರಲ್ಲಿ ಲೆನಿನ್ ಕುರಿತು ಎರಡು ಮಹತ್ವದ ಕೃತಿಗಳನ್ನು ರಚನೆ ಮಾಡಿದ. ಸೋವಿಯತ್ ರಷ್ಯಾದ ಮಾರ್ಕ್ಸ್‌ವಾದದ ದೌರ್ಬಲ್ಯಗಳ ಕುರಿತಾದ ಫಿಶರ್ ನ ಚಿಂತನೆಗಳು ಕಮ್ಯೂನಿಷ್ಟ್ ರಾಷ್ಟ್ರಗಳನ್ನು ತಮ್ಮ ಮಾರ್ಕ್ಸ್‌ವಾದವನ್ನು ಪುನರ್ ವ್ಯಾಖ್ಯಾನಿಸಲು ಪ್ರೇರೇಪಿಸಿದವು. ಜೊತೆಗೆ ಜಗತ್ತಿನಲ್ಲಿ ಕಮ್ಯೂನಿಷ್ಟ್ ವಿಚಾರವಾದದ ತಳಹದಿಯ ಮೇಲೆ ಸಮಾಜವಾದದ ಚಿಂತನೆಯೊಂದು ಚಿಗುರೊಡೆಯಲು ಪರೋಕ್ಷವಾಗಿ ಕಾರಣವಾಯಿತು. ಸರ್ವರಿಗೆ ಸಮ ಪಾಲು ಎಂಬ ಮಾರ್ಕ್ಸ್‌ವಾದದ ಚಿಂತನೆಗೆ, ಸರ್ವರಿಗೆ ಸಮ ಬಾಳು ಎಂಬ ಸಮಾಜವಾದ ಚಿಂತನೆಯೊಂದನ್ನು ಕಸಿ ಮಾಡಿ, ಅದನ್ನು ಉದಾತ್ತ ಧ್ಯೇಯಗಳ ಮೂಲಕ ಜಗತ್ತಿನಾದ್ಯಂತ ವಿಸ್ತರಿಸಲು ಸಾಧ್ಯವಾಯಿತು. ಭಾರತದ ಸಂದರ್ಭದಲ್ಲಿ ಎಂ.ಎನ್.ರಾಯ್ ಮತ್ತು ಲೋಹಿಯಾ, ಕರ್ಪೂರಿ ಠಾಕೂರ್ ಮುಂತಾದವರ ಮೂಲಕ ಹುಟ್ಟಿಕೊಂಡ ಈ ಚಿಂತನೆಯು ನಮ್ಮ ಕರ್ನಾಟಕದ ಶಾಂತವೇರಿ ಗೋಪಾಲಗೌಡ, ಜೆ.ಹೆಚ್. ಪಟೇಲ್, ಯು.ಆರ್. ಅನಂತಮೂರ್ತಿ, ಪಿ.ಲಂಕೇಶ್, ತೇಜಸ್ವಿ, ಪ್ರೊ.ಎಂ.ಡಿ.ನಂಜುಂಡಸ್ವಾಮಿ ಸೇರಿದಂತೆ ಹಲವವರ ಮೂಲಕ ಕನ್ನಡದ ನೆಲಕ್ಕೂ ಸಹ ಕಾಲಿಟ್ಟಿತು.

ಒಬ್ಬ ಸೂಕ್ಷ್ಮ ಗ್ರಾಹಿ ಪತ್ರಕರ್ತನೊಬ್ಬ ತನಗರಿವಿಲ್ಲದಂತೆ ಹಲವು ಮನುಕುಲದ ಚಿಂತನೆಗಳನ್ನು ಹೇಗೆ ಜಗತ್ತಿಗೆ ವಿಸ್ತರಿಸಬಲ್ಲ ಎಂಬುದಕ್ಕೆ, ಲೂಯಿಸ್ ಫಿಶರ್ ನಮಗೆ ಮಾದರಿಯಾಗಿದ್ದಾನೆ. ಪಶ್ಚಿಮದ ಜಗತ್ತಿಗೆ ಗಾಂಧಿ ಚಿಂತನೆಗಳನ್ನು ಮತ್ತು ಸಮಾಜವಾದದ ಚಿಂತನೆಗಳನ್ನು ಹರಡಲು ಕಾರಣಕರ್ತನಾಗಿ, ಅಮೇರಿಕಾದ ಪ್ರಿನ್ಸ್‌ಟನ್ ಕಾಲೇಜಿನಲ್ಲಿ ರಾಜಕೀಯ ಶಾಸ್ತ್ರವನ್ನು ಬೋಧಿಸುತ್ತಿದ್ದ ಲೂಯಿಸ್ ಫಿಶರ್ ೧೯೭೦ ರ ಜನವರಿ ೧೫ ರಂದು ನಿಧನ ಹೊಂದಿದನು. ಆದರೆ, ಈ ಜಗತ್ತು ಮಹಾತ್ಮ ಗಾಂಧೀಜಿಯವರನ್ನು ನೆನಪಿಸಿಕೊಂಡಾಗ ಅವರ ಜೊತೆ ಲೂಯಿಸ್ ಫಿಶರ್ ಕೂಡ ನೆನಪಾಗುತ್ತಾನೆ. ಇದು ಆತನ ದೈತ್ಯ ಪ್ರತಿಭೆಗೆ ಸಾಕ್ಷಿ.

ಸಾಭಾರ: ಗಾಂಧೀಭವನ್ ವಾರ್ತಾ

ಯುದ್ಧಗಳು ಹಾಗೂ ಆಯುಧಗಳು

– ಪ್ರಸನ್ನ

ಮಾನವ ಪ್ರಾಣಿ ಕಂಡುಹಿಡಿದ ಮೊದಲ ಉಪಕರಣ ಸೌಟಲ್ಲ, ನೇಗಿಲೂ ಅಲ್ಲ. ಅದೊಂದು ಆಯುಧ.

ಈಗಲೂ, ಮಾನವ ಪ್ರಾಣಿ ಕಂಡು ಹಿಡಿಯುತ್ತಿರುವ ಹೆಚ್ಚಿನ ಉಪಕರಣಗಳು ಆಯುಧಗಳೇ ಸರಿ.

ಶಿಲಾಯುಗದಲ್ಲಿ ಆಯುಧವನ್ನು ಮೊದಲ ಬಾರಿ ಕಂಡಯಹಿಡಿದಾಗ, ಮಾನವ ಪ್ರಾಣಿ ಪ್ರಾಣಿ ಮಾತ್ರವೇ ಆಗಿತ್ತು. ಹಾಗಾಗಿ ಅದು ಕಂಡುಹಿಡಿದ ಮೊದಲ ಉಪಕರಣ ಆಯುಧವಾಗಿದ್ದದ್ದು ಸಹಜವಾಗಿತ್ತು. ಬೇಟೆಯಾಡಿ ಆಹಾರ ಸಂಗ್ರಹಣೆ ಮಾಡಿಕೊಳ್ಳುವುದು, ಇತರೆ ಕ್ರೂರಪ್ರಾಣಿಗಳಿಂದ ರಕ್ಷಣೆ ಪಡೆದುಕೊಳ್ಳುವುದು ಆ ಪ್ರಾಣಿಗೆ ಅನಿವಾರ್ಯವಾಗಿತ್ತು.

ಸೌಟು ನೇಗಿಲು ರಾಟೆ ಗಾಲಿ...ಇತ್ಯಾದಿ ಅಹಿಂಸಾತ್ಮಕ ಉಪಕರಣಗಳು ನಂತರ ಬಂದವು. ಸಭ್ಯತೆಯು ಸ್ಥಿರಗೊಂಡ ನಂತರ ಬಂದವು.

ಆಯುಧವೆಂಬುದು ಸಭ್ಯತೆಯ ನೈತಿಕ ದ್ವಂದ್ವ.

ಸಭ್ಯತೆಯ ನಿರ್ವಹಣೆಗಾಗಿ ಆಯುಧಗಳ ಬಳಕೆ ಮಾಡುವುದು ಸಹಜವಲ್ಲ, ಸಾಧುವೂ ಅಲ್ಲ.

ಆದರೆ ನಾವು ಹಾಗೆ ಮಾಡುತ್ತಿದ್ದೇವೆ. ಇತರೆ ಮಾನವರನ್ನು ಹಿಂಸಿಸಲಿಕ್ಕೆ, ಹಾಗೂ ಅವರ ಮೇಲೆ ಅಧಿಕಾರ ಸಾಧಿಸಲಿಕ್ಕೆ, ಆಯುಧಗಳನ್ನು ಬಳಕೆಮಾಡುತ್ತಿದ್ದೇವೆ.

o o o

ಶ್ರಮದ ಬದುಕು ಸಾಧ್ಯವಾದ ಮೇಲೂ, ಕಾಡುಪ್ರಾಣಿಗಳ ಕಾಟ ಕಡಿಮೆಯಾದ ಮೇಲೂ, ಬದುಕು ಅಹಿಂಸಾತ್ಮಕವಾದ ಮೇಲೂ, ಮಾನವನಲ್ಲಿ ಆಯುಧಗಳ ಆಸಕ್ತಿ ಕಡಿಮೆಯಾಗಲಿಲ್ಲ. ಹೆಚ್ಚಾಯಿತು. ಆಯುಧ ಹಿಡಿದು ನಿಲ್ಲುವುದು, ಆಯುಧ ಧರಿಸುವುದು, ಹಿರಿಮೆಯಾಯಿತು. ಖಯಾಲಿಯಾಯಿತು. ದೇವರುಗಳ ಕೈಯಲ್ಲಿ ಆಯುಧ ಹಿಡಿಸಿ ನಿಲ್ಲಿಸಿದೆವು ನಾವು.

ಏನಿಲ್ಲವೆಂದರೂ, ಸಿನೆಮಾ ಮಂದಿರಗಳಲ್ಲಿ ಕೂತು ರಕ್ತಸಿಕ್ತ ಕಚ್ಚಾಟವನ್ನಾದರೂ ನೋಡಿ ಆನಂದಿಸಲು ಬಯಸುತ್ತದೆ ಮಾನವ ಪ್ರಾಣಿ.

ಸ್ವಯಂಚಾಲಿತ ಯುಗದಲ್ಲಿ ಆಯುಧಗಳ ಆಕರ್ಷಣೆ ಮತ್ತೂ ಹೆಚ್ಚಾಯಿತು.

ಈ ಯುಗದ ಹೆಚ್ಚಿನ ಅಭಿವೃದ್ಧಿ ಹಾಗೂ ಸಂಶೋಧನೆಗಳು ಶಸ್ತ್ರಾಸ್ತ್ರಗಳ ಕ್ಷೇತ್ರದಲ್ಲಿ ನಡೆದಿವೆ. ಆದರೀ ಸಂಶೋಧನೆ ಕಣ್ಣಿಗೆ ಕಾಣಿಸದು. ಅಥವಾ ಇದರ ವಾಸನೆ ಮೂಗಿಗೆ ಬಡಿಯದು. ಸಂಶೋದನೆಗಳೇ ಏಕೆ, ಆಯುಧಗಳೂ ಕೂಡ ಕಣ್ಣಿಗೆ ಕಾಣಿಸವು. ಆದರವು ಇವೆ, ಭಯಾನಕವಾಗಿವೆ. ಎಲ್ಲ ದೇಶಗಳ ಬಜೆಟ್‌ಗಳಲ್ಲೂ ಸಿಂಹಪಾಲು ರಕ್ಷಣಾಖಾತೆ ಎಂಬ ಹೆಸರಿನ ಯುದ್ಧ ಖಾತೆಗೇ ಮೀಸಲಾಗಿರುತ್ತದೆ.

ಮತ್ತೊಂದು ಸಂಗತಿಯಿದೆ.

ಚರಿತ್ರೆಯೊಳಗೆ ನಡೆದಿರುವ ಹೆಚ್ಚಿನ ಯುದ್ಧಗಳು ಧರ್ಮಕಾರಣಕ್ಕಾಗಿ ನಡೆದಿವೆ.

ಆಯುಧಗಳನ್ನು ನಿಷೇಧಿಸಬೇಕಿದ್ದ ಧರ್ಮಗಳೇ ಆಯುಧಗಳ ಬಳಕೆ ಮಾಡಿವೆ.

ಹೆಚ್ಚೂಕಡಿಮೆ ಎಲ್ಲ ಸಾಂಸ್ಥಿಕ ಧರ್ಮಗಳೂ, ಪ್ರಾಯಶಃ ಬೌದ್ಧ ಹಾಗೂ ಜೈನ ಧರ್ಮವನ್ನು ಹೊರತುಪಡಿಸಿ, ಯುದ್ಧ ಹೂಡಿಯೇ ವಿಸ್ತಾರಗೊಂಡಿವೆ. ಹೆಚ್ಚಿನ ರಾಜಕೀಯ ಸಿದ್ಧಾಂತಗಳು ಹಾಗೂ ರಾಜಕೀಯ ಪಕ್ಷಗಳು ಹಿಂಸೆಯ ಮೂಲಕವೇ ಅಧಿಕಾರ ಹಿಡಿದಿವೆ.

ಯುದ್ಧ ಹಾಗೂ ಹಿಂಸಾಚಾರಗಳನ್ನು ರಕ್ಷಣೆಯ ತಂತ್ರ ಎಂದು ಕರೆಯಲಾಗುತ್ತದೆ.

ಎಲ್ಲ ಜಗಳಗಳಿಗೆ ಎರಡು ಪಕ್ಷಗಳು ಇದ್ದೇ ತೀರಬೇಕು ತಾನೆ?

ಹಾಗಾಗಿ ಯಾವುದು ರಕ್ಷಣೆ ಯಾವುದು ದಾಳಿ ಎಂದು ಹೇಗೆ ಹೇಳುವುದು? ಇಷ್ಟೊಂದು ಬಗೆಯ ಆಯುಧಗಳು ನಮ್ಮನ್ನು ಸುತ್ತುಗಟ್ಟಿರುವಾಗ ಸರಿತಪ್ಪುಗಳ ನಿರ್ಣಯವನ್ನು ಹೇಗೆ ಮಾಡುವುದು?

ಆಯುಧವೆಂಬುದು ನಿರ್ಜೀವವಸ್ತುವಾದ್ದರಿಂದ ಅವು ನಮ್ಮ ನಿಯಂತ್ರಣದಲ್ಲಿರುತ್ತವೆ ಎಂದು ನಾವು ತಿಳಿಯುತ್ತೇವೆ. ಮಾರುಕಟ್ಟೆ ಹಾಗೂ ಹಣದ ಬಗ್ಗೆ ಕೂಡ ಇದೇ ರೀತಿ ತಿಳಿಯುತ್ತೇವೆ. ಆದರಿದು ನಿಜವೇ? ವಿವೇಚನೆ ಹಾಗೂ ನೈತಿಕಪ್ರಜ್ಞೆಗಳು ಆಯುಧಗಳನ್ನು (ಅಥವಾ ಮಾರುಕಟ್ಟೆ, ಅಥವಾ ಹಣವನ್ನು ನಿಯಂತ್ರಣ ದಲ್ಲಿಡಬಲ್ಲುದೆ?)

ನಾವು ಬಳಕೆಮಾಡುವ ಬದಲು ಆಯುಧಗಳೇ ನಮ್ಮನ್ನು ಬಳಕೆಮಾಡಬುದಲ್ಲವೇ?

ಮಾಡುತ್ತವೆ, ಮಾಡುತ್ತಿವೆ.

o o o

ಈ ಬಗ್ಗೆ ರಾಮಾಯಣದಲ್ಲಿ ಒಂದು ಕತೆಯಿದೆ:

ಸೀತಾದೇವಿಯು ಗಂಡ ರಾಮನಿಗೆ ಹೇಳುವ ತಿಳುವಳಿಕೆಯಿದು.

ಯುದ್ಧಕಾಂಡಕ್ಕೆ ಪೂರ್ವಭಾವಿಯಾಗಿ, ಅರಣ್ಯಕಾಂಡದಲ್ಲಿ ಬರುವ ಕತೆಯಿದು. ರಾಮಸೀತೆಯರು ವನವಾಸದಲ್ಲಿದ್ದಾರೆ. ಒಂದು ದಿನ ಕೆಲವು ಬ್ರಾಹ್ಮಣರು ರಾಮಸೀತೆ ಲಕ್ಷ್ಮಣರ ಕುಟೀರಕ್ಕೆ ಬಂದು, ತಮಗೆ ತೊಂದರೆ ಕೊಡುತ್ತಿರುವ ರಾಕ್ಷಸರ ಬಗ್ಗೆ ರಾಮನ ಬಳಿ ಹೇಳಿಕೊಳ್ಳುತ್ತಾರೆ. ರಾಮ ಹಿಂದೆ ಮುಂದೆ ಯೋಚಿಸದೆ ರಾಕ್ಷಸರನ್ನು ಸಂಹರಿಸುತ್ತೇನೆ ಎಂದು ಅವರಿಗೆ ಒಪ್ಪಿಗೆ ಕೊಡಲು ಹೊರಡುತ್ತಾನೆ. ಸಂಭಾಷಣೆಯನ್ನು ಕೇಳಿಸಿಕೊಳ್ಳುತ್ತಿದ್ದ ಸೀತೆ ಗಂಡನನ್ನು ಒಳಕರೆಯುತ್ತಾಳೆ. ದುಡುಕಬೇಡಿ ಎಂದು ಬುದ್ಧಿವಾದ ಹೇಳುತ್ತಾಳೆ.

ಬುದ್ಧಿವಾದವನ್ನು ಕತೆಯೊಂದರ ರೂಪದಲ್ಲಿ ಹೇಳುತ್ತಾಳೆ:

ಒಂದಾನೊಂದು ಕಾಲದಲ್ಲಿ ಒಬ್ಬ ತಪಸ್ವಿ ಇದ್ದನಂತೆ. ಆತ ನಿರ್ಲಿಪ್ತ ವ್ಯಕ್ತಿ ಹಾಗೂ ಅಹಿಂಸಾತ್ಮಕ ಸಾಧಕ. ತನ್ನ ಕುಟೀರದಲ್ಲಿ ಕುಳಿತು ಆತ ತಪಸ್ಸು ಮಾಡುತ್ತಿರಲಾಗಿ ಒಂದು ದಿನ ಒಬ್ಬ ಬೇಡ ಅಲ್ಲಿಗೆ ಬಂದನಂತೆ. ತಪಸ್ವಿಯ ಕಾಲಿಗೆರಗಿ, ತನಗೆ ತನಗೆ

ಕಷ್ಟಕಾರ್ಪಣ್ಯಗಳು ಬಂದೊದಗಿವೆಯೆಂದೂ, ಕೆಲಕಾಲ ತನ್ನ ಆಯಧಗಳನ್ನು ಆಶ್ರಮದಲ್ಲಿ ಇಟ್ಟುಕೊಂಡಿರಬೇಕೆಂದು, ತಪಸ್ವಿಯಲ್ಲಿ ಮೊರೆಯಿಟ್ಟನಂತೆ. ಕರುಣಾಮಯಿಯಾದ ತಪಸ್ವಿ ಒಪ್ಪಿಗೆ ನೀಡಿ ತಪಸ್ಸಿಗೆ ಹಿಂದಿರುಗಿದನಂತೆ. ಕುಟೀರದ ಮೂಲೆಯಲ್ಲಿ ಆಯುಧಗಳನ್ನಿಟ್ಟು ಬೇಡ ಅಲ್ಲಿಂದ ತೆರಳಿದನಂತೆ.

ಕುಟೀರದಲ್ಲೀಗ ಆಯುಧಗಳಿವೆ. ಅಹಿಂಸಾತ್ಮಕ ಸನ್ಯಾಸಿಯೂ ಇದ್ದಾನೆ.

ಮೊದಮೊದಲು ಸನ್ಯಾಸಿ ಆಯುಧಗಳನ್ನು ಗಮನಿಸಲಿಲ್ಲ. ಕ್ರಮೇಣ ಅವನ ಗಮನವು ಆಯುಧಗಳ ಕಡೆಗೆ ಹರಿಯಿತು. ಆಸಕ್ತಿ ಹುಟ್ಟಿತು. ಮುಟ್ಟಬೇಕು ಅನ್ನಿಸಿತು. ಮುಟ್ಟಿದಾಗ ಹಿಡಿಯಬೇಕು ಅನ್ನಿಸಿತು. ಹಿಡಿದಾಗ ಹಿಡಿದಾಡಬೇಕು ಅನ್ನಿಸಿತು. ಹಿಡಿದಾಡಿದಾಗ ಪ್ರಯೋಗಮಾಡಿ ನೋಡಬೇಕು ಅನ್ನಿಸಿತು. ಪ್ರಯೋಗ ಮಾಡಿದಾಗ ಬೇಟೆ ಖುಷಿ ಅನ್ನಿಸಿತು. ಹೀಗೆ, ತನಗೇ ತಿಳಿಯದಂತೆ, ಅಹಿಂಸಾತ್ಮಕ ತಪಸ್ವಿ ಹಿಂಸ್ರಪಶುವಾಗಿ ಪರಿವರ್ತಿತನಾಗಿದ್ದ.

ಕೆಲಕಾಲದ ನಂತರ, ಆಯುಧಗಳನ್ನು ಪಡೆಯಲೆಂದು ಬೇಡ ಹಿಂದಕ್ಕೆ ಬಂದನಂತೆ. ಆತನಿಗೆ ಆಶ್ಚರ್ಯ ಕಾದಿತ್ತು. ಕುಟೀರದಲ್ಲಿ ಸನ್ಯಾಸಿ ಕಾಣಲಿಲ್ಲ. ಮತ್ತೊಬ್ಬ ಬೇಡ! ತನಗಿಂತ ಕ್ರೂರಿಯಾದ, ತನಗಿಂತ ನಿಷ್ಕರುಣಿಯಾದ, ಬೇಡ ಕಂಡ. ಕುಟೀರದ ತುಂಬ ಹಸಿಮಾಂಸದ ಕೊಳೆತ ವಾಸನೆ ಅಡರಿಕೊಂಡಿತ್ತು. ನೆಲರಕ್ತಸಿಕ್ತವಾಗಿತ್ತು. ಬೇಡ ನಡುಗಿ ಹೋದ. ಆಯುಧಗಳನ್ನು ಹಿಂದಕ್ಕೆ ಕೇಳುವ ಧೈರ್ಯಕೂಡಾಮಾಡದೆ ಅಲ್ಲಿಂದ ಕಂಬಿಕಿತ್ತ. ಆಯುಧಗಳ ಆಕರ್ಷಣೆ ಇಂತಹದ್ದೆಂದು ಹೇಳಿ ಸೀತಾದೇವಿ ಕತೆ ಮುಗಿಸಿದಳು.

ಕತೆ ಕೈಯಂತ್ರಗಳ ಯುಗದ್ದು. ಕೋದಂಡ ಕತ್ತಿ ಎಲ್ಲವೂ ಕೈಯಂತ್ರಗಳ ಯುಗದ ಆಯುಧಗಳು.

ಈಗ ನಮಗೆ ಸ್ವಯಂಚಾಲಿತ ಕೋದಂಡಗಳು ಸಿಕ್ಕಿವೆ.

ಸಹಸ್ರ ಸಹಸ್ರ ರುಂಡಗಳನ್ನು ಒಂದೇ ಏಟಿಗೆ ಹೊಡೆದುರುಳಿಸಬಲ್ಲವು ಅವು. ಗುಂಡಿಯೊತ್ತಿದರೆ ಸಾಕು, ದೇಶ ದೇಶಗಳನ್ನೇ ನಿರ್ನಾಮಮಾಡಬಲ್ಲವು. ಹಿಂಸಿಸುವವಗೆ ಹಿಂಸೆಯ ಅನುಭವ ಕೂಡ ಆಗುವುದಿಲ್ಲ. ನರಳುವಿಕೆ ಕಣ್ಣಿಗೆ ಬೀಳುವುದಿಲ್ಲ, ಕಿವಿಗೆ ತಾಕುವುದಿಲ್ಲ. ಕೈ ರಕ್ತಸಿಕ್ತವಾಗುವುದಿಲ್ಲ. ಯಾರು ಸತ್ತರು, ಹೇಗೆ ಸತ್ತರು, ಎಷ್ಟು ನರಳಿದರು. ಎಂಬ ಯಾವ ಅನುಭವವೂ ನಮಗಾಗುವುದಿಲ್ಲ.

ಸ್ವಯಂಚಾಲಿತ ಆಯುಧಗಳು ನೈತಿಕಾತೀತ ಆಯುಧಗಳು!

ದುಡ್ಡಿದ್ದವರು ಹಾಗೂ ಮಾರುಕಟ್ಟೆಯ ಹಿಡಿತ ಉಳ್ಳವರು ಮಾತ್ರವೇ ಗೆಲ್ಲಬಲ್ಲ ಯುದ್ಧಗಳು ಆಧುನಿಕ ಯುದ್ಧಗಳು. ಶ್ರಮಜೀವಿಗಳು ರೈತರು ಕುಶಲಕರ್ಮಿಗಳನ್ನು ಶೋಷಣೆಯ ಕಪಿಮುಷ್ಠಿಯೊಳಗೆ ಬಂಧಿಸಿಹಿಡಿದಿರುವ ಸಾಧನಗಳು ಆಧುನಿಕ ಯುದ್ಧಗಳು.

ಬಡವರು ಆಧುನಿಕ ಹಿಂಸೆಯನ್ನು ಪ್ರತಿ ಹಿಂಸೆಯಿಂದ ಎದುರಿಸಬೇಕು. ಎದುರಿಸಬಹುದು ಎಂದು ಕೆಲವರು ತಿಳಿಯುತ್ತಾರೆ. ಅದು ಸಾಧ್ಯವಿರದ ಮಾತು.

ಬಡವರಿಗೆ ಲಭ್ಯವಿರುವ ಏಕೈಕ ಅಸ್ತ್ರ ಅಹಿಂಸೆಯೇ ಆಗಿದೆ.

ಕೈಗಾರಿಕೀಕರಣದಿಂದ ಗ್ರಾಮಸ್ಥರ ಮತ ಹರಣ

ಮೂಲ – ಜಿತೇಂದ್ರ ಅನುವಾದ – ಸುರೇಂದ್ರ ಕೌಲಗಿ

(ಉತ್ತರಪ್ರದೇಶ ಸರ್ಕಾರ ಹಳ್ಳಿಗಳನ್ನು ಕೈಗಾರಿಕಾ ಪ್ರದೇಶದ ಪ್ರಾಧಿಕಾರದ ಕಕ್ಷೆಯೊಳಗೆ ತರಲು ನಿರಂತರ ಪ್ರಯತ್ನಿಸುತ್ತಿರುವುದು ಸಂವಿಧಾನಕ್ಕೆ ವಿರೋಧವಾಗಿದೆ.)

ಕಳೆದ ವರ್ಷದ ಸೆಪ್ಟೆಂಬರ್ ತಿಂಗಳಿಂದ ದಿಲ್ಲಿ ಬಳಿಯ ನೊಯಿದ ಮತ್ತು ಬೃಹತ್ ನೊಯಿದ ಕೈಗಾರಿಕಾ ಪ್ರದೇಶದ ೨೦೭ ಗ್ರಾಮಗಳ ನಿವಾಸಿಗಳು ಕೈಗಾರಿಕಾ ಪ್ರಾಧಿಕಾರದ ಕಟ್ಟಡದ ಮುಂದೆ ಪ್ರತಿಭಟನೆ ನಡೆಸುತ್ತಲಿದ್ದಾರೆ. ಸಂವಿಧಾನ ದತ್ತವಾದ ಸ್ವ ಆಡಳಿತದ ಹಕ್ಕನ್ನು ಪುನರ್‌ಸ್ಥಾಪಿಸಿಕೊಡಿ ಎಂಬುದೇ ಅವರ ಪ್ರತಿಭಟನೆಯ ಉದ್ದೇಶವಾಗಿದೆ. ಈ ಸಮಸ್ಯೆ ಭುಗಿಲೆದ್ದದ್ದು ಸೆಪ್ಟೆಂಬರ್ ೧೮ರಂದು ರಾಜ್ಯದ ಪಂಚಾಯತ್ ರಾಜ್ ಇಲಾಖೆ ಒಂದು ಆದೇಶ ಹೊರಡಿಸಿ ಈ ೨೦೭ ಗ್ರಾಮಗಳು ಕೈಗಾರಿಕಾ ಉಪನಗರಗಳ ವ್ಯಾಪ್ತಿಯಲ್ಲಿ ಬರುವುದರಿಂದ ಅವು ನವೆಂಬರ್‌ನಲ್ಲಿ ನಡೆಯಲಿರುವ ಪಂಚಾಯತ್ ಚುನಾವಣೆಯಲ್ಲಿ ಭಾಗವಹಿಸುವಂತಿಲ್ಲ ಎಂದು ಹೇಳಿದ್ದು. ಈ ಸರ್ಕಾರಿ ಆಜ್ಞೆಯ ಅನುಗುಣವಾಗಿ ಸರ್ಕಾರವು ನೂತನ ಓಕ್ಲಾ ಕೈಗಾರಿಕಾ ಅಭಿವೃದ್ಧಿ ಪ್ರಾಧಿಕಾರ ಮತ್ತು ಬೃಹತ್ ನೊಯಿಡಾ ಕೈಗಾರಿಕಾ ಅಭಿವೃದ್ಧಿ ಪ್ರಾಧಿಕಾರಗಳನ್ನು ಸ್ಥಾಪಿಸಿತು. ಇನ್ನು ಮೇಲೆ ಆ ಪ್ರಾಧಿಕಾರಗಳೇ ಈ ಎಲ್ಲ ಗ್ರಾಮಗಳ ಅಭಿವೃದ್ಧಿಗೆ ಜವಾಬ್ದಾರವಾಗಿತ್ತವೆಯೇ ವಿನಃ ಪ್ರಜಾಸತ್ತಾತ್ಮಕವಾಗಿ ಚುನಾಯಿತ ಗ್ರಾಮಪಂಚಾಯಿತಿಗಳಲ್ಲಿ ಎಂದು ಹೇಳಿದೆ. ಈ ಆದೇಶದಿಂದಾಗಿ ಆ ಗ್ರಾಮದ ಗ್ರಾಮಸ್ಥರು ತಮ್ಮ ಗ್ರಾಮದ ಅಭಿವೃದ್ಧಿ ಯೋಜನೆಗಳಾದ ರಸ್ತೆಗಳ ನಿರ್ಮಾಣ, ಕುಡಿಯುವ ನೀರಿನ ಪೂರೈಕೆ ಮತ್ತು ಸ್ವಚ್ಛತಾ ಕಾರ್ಯಕ್ರಮ ಮುಂತಾದ ಕಾರ್ಯಕ್ರಮಗಳಲ್ಲಿ ಅವರು ಭಾಗವಹಿಸುವಂತಿಲ್ಲ. ಕೈಗಾರಿಕೆಗೆ ಸಂಬಂಧಿಸಿದ ಅಧಿಕಾರಿಗಳು ಹೆಚ್ಚು ಆದಾಯತರುವ ದೊಡ್ಡ ಯೋಜನೆಗಳಲ್ಲಿ ಆಸಕ್ತಿಯುಳ್ಳವರಾಗಿದ್ದಾರೆ. ಮನೆಗಳ ನಿರ್ಮಾಣಗಳ ನಕ್ಷೆ ತಯಾರಿಸುವುದರಿಂದ ಮತ್ತು ಕಟ್ಟಡಗಳ ನಿರ್ಮಿತಿಯಲ್ಲಿ ಆಸಕ್ತಿ ಹೊಂದಿರುತ್ತಾರೆ ಹಾಗೂ ಜಮೀನಿನ ಮತ್ತು ಕಟ್ಟಡಗಳ ಬೆಲೆಯನ್ನು ನಿರ್ಣಯಿಸುವುದರಲ್ಲಿ ತತ್ಪರರಾಗಿರುತ್ತಾರೆ. ಕೈಗಾರಿಕಾ ಕ್ಷೇತ್ರಕ್ಕೆ ಒಳಪಟ್ಟ ಹಳ್ಳಿಗಳು ಸ್ಥಾನೀಯ ಕ್ಷೇಮಾಭಿವೃದ್ಧಿ ಸಂಘಗಳಾಗಿ ರೂಪಾಂತರಗೊಳ್ಳಬಹುದು. ಆದರೆ ಅಂಥ ಸಂಘಗಳಿಗೆ ಯಾವುದೇ ಕಾನೂನಿನ

ಮನ್ನಣೆಯಿಲ್ಲ.

ಉಪನಗರದ ಭಾಗವಾಗಿರುವುದರಿಂದ ಈ ಗ್ರಾಮಗಳು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ೨೯ ಕಲ್ಯಾಣಕಾರಿ ಯೋಜನೆಗಳಿಗೆ ಒಳಪಡುವುದಿಲ್ಲ. ಬಹಳಷ್ಟು ನಿವಾಸಿಗಳು ವ್ಯವಸಾಯ ಮತ್ತು ವ್ಯವಸಾಯ ಸಂಬಂಧಿತ ಕೆಲಸಗಳೊಂದಿಗೆ ಸಂಬಂಧ ಹೊಂದಿದ್ದಾರೆ. ಈ ಮೊದಲು ಪಂಚಾಯತಿಗಳ ಮುಖ್ಯಸ್ಥರು ವಿವಿಧ ಸರ್ಕಾರಿ ಯೋಜನೆಗಳ ಫಲಾನುಭವಿಗಳನ್ನು ಗುರುತಿಸಿ ಅವರಿಗೆ ಸಹಾಯದೊರೆಯುವಂತೆ ಮಾಡುತ್ತಿದ್ದರು. ಹಳ್ಳಿಯ ಯಾವುದೇ ವಿಧವಾದ ತೊಂದರೆಗಳ ನಿವಾರಣೆಗೆ ಗಮನ ಕೊಡುತ್ತಿದ್ದರು. ಆದರೆ ಈಗ ಆ ಗ್ರಾಮಗಳ ನಿವಾಸಿಗಳು ಯಾವುದೇ ಪ್ರಕಾರದ ಸಹಾಯಕ್ಕಾಗಿ ಜಿಲ್ಲಾ ಕೇಂದ್ರಕ್ಕೆ ಎಡತಾಕಬೇಕಾಗುತ್ತದೆ. ನೊಯಿದಾ ಕೈಗಾರಿಕಾ ಕ್ಷೇತ್ರದ ಹಳ್ಳಿಗಳ ನಿವಾಸಿಗಳಿಗೆ ಪಂಚಾಯತ್ ಚುನಾವಣೆಯಲ್ಲಿ ಭಾಗವಹಿಸುವುದು ತಪ್ಪಿದ್ದು ಇದೇ ಮೊದಲ ಬಾರಿಗೆ ಆಗಿದ್ದರೂ ರಾಜ್ಯ ಸರ್ಕಾರ ಈ ಮೊದಲು ಅಂಥ ಇಂದು ಪ್ರಯತ್ನವನ್ನು ೨೦೦೧ ಡಿಸೆಂಬರ್ ತಿಂಗಳಲ್ಲಿ ಮಾಡಿತ್ತು. ಅಂದಿನ ಮುಖ್ಯಮಂತ್ರಿ ರಾಜನಾಥ್ ಸಿಂಗ್ ಕೈಗಾರಿಕಾ ಅಭಿವೃದ್ಧಿ ೧೯೭೬ರ ಕಾನೂನಿನ ತಿದ್ದುಪಡಿಯನ್ನು ತಂದು ೨೦೭ ಹಳ್ಳಿಗಳು ಕೈಗಾರಿಕಾ ಪ್ರಾಧಿಕಾರದ ಕಕ್ಷೆಯೊಳಗೆ ಬರುವಂತೆ ಮಾಡಿದರು. ಈ ತಿದ್ದುಪಡಿಗೆ ಆ ಗ್ರಾಮಗಳ ಗ್ರಾಮಸ್ಥರಿಂದ ಬಲವಾದ ಪ್ರತಿಭಟನೆ ಬಂದಿತು. ೨೦೦೫ರಲ್ಲಿ ಪಂಚಾಯತ್ ರಾಜ್ಯ ಚುನಾವಣೆಯ ಮುನ್ನ ಆಗಿನ ಮುಖ್ಯಮಂತ್ರಿ ಮುಲಾಯಂ ಸಿಂಗ್ ಯಾದವ್ ಆ ತಿದ್ದುಪಡಿಯನ್ನು ಹಿಂದೆಗೆದುಕೊಂಡು ಪಂಚಾಯತ್ ಚುನಾವಣೆಯಲ್ಲಿ ಆ ಹಳ್ಳಿಗಳು ಭಾಗವಹಿಸುವುದಕ್ಕೆ ಅವಕಾಶ ಮಾಡಿಕೊಟ್ಟರು. ಆದರೆ ೨೦೦೯ರಲ್ಲಿ ಮಾಯಾವತಿ ಸರ್ಕಾರವು ಆ ತಿದ್ದುಪಡಿಯನ್ನು ಬದಲಾಯಿಸಿತು. ಅಷ್ಟೇ ಅಲ್ಲ ಇನ್ನು ೯೮೨ ಹಳ್ಳಿಗಳು ಯಮುನಾ ಎಕ್ಸ್‌ಪ್ರೆಸ್ ವೇ ಕೈಗಾರಿಕಾ ಅಭಿವೃದ್ಧಿ ಪ್ರಾಧಿಕಾರದ ಕಕ್ಷೆಯೊಳಗೆ ಬರುವಂತೆ ಮಾಡಿದರು. ಆದರೆ ಪುನಃ ವಿರೋಧ ಬಂದದ್ದರಿಂದ ಮಾಯಾವತಿಯವರು ೨೦೧೦ರ ಪಂಚಾಯತ್ ಚುನಾವಣೆಗೆ ಮುನ್ನ ಆ ಆದೇಶವನ್ನು ಹಿಂದೆಗೆದುಕೊಂಡರು. ನಿಜವಾದ ಪೆಟ್ಟು ಅಖಿಲೇಶ್ ಯಾದವ್ ಸರ್ಕಾರದಿಂದ ಬಂದಿದೆ. ಜನವರಿ ೨೦೧೫ರ ಆದೇಶದ ಪ್ರಕಾರ ನೊಯಿದ ಮತ್ತು ಬೃಹತ್ ನೊಯಿದ ಪ್ರದೇಶದಲ್ಲಿಯ ೨೦೭ ಹಳ್ಳಿಗಳು ಕೈಗಾರಿಕಾ ಪ್ರಾಧಿಕಾರದ ಭಾಗಗಳೆಂದು ಘೋಷಿಸಿತು. ಈ ಸರ್ಕಾರಿ ಆದೇಶವು ಯಮುನಾ ಎಕ್ಸ್‌ಪ್ರೆಸ್ ವೇ ಕೈಗಾರಿಕಾ ಪ್ರಾಧಿಕಾರಕ್ಕೆ ಸೇರಿದ ಆ ೯೮೨ ಹಳ್ಳಿಗಳ ಭವಿಷ್ಯದ ಬಗ್ಗೆ ಮೌನವಹಿಸಿದೆ. ಸೆಪ್ಟೆಂಬರ್ ೧೮ರ ಆದೇಶ ಹಳೆಯ ಸರ್ಕಾರಿ ಆದೇಶದ ಮರುಜೀವ ಪಡೆದಿದೆಯಷ್ಟೇ. ಅಖಿಲೇಶ್ ಯಾದವ್ ಸರ್ಕಾರದ ಈ ತೀರ್ಮಾನವನ್ನು ಪ್ರಶ್ನಿಸಿ ಮಾರ್ಚ್ ೨೦೧೫ರಂದು ಅಲಹಾಬಾದ್ ಹೈಕೋರ್ಟ್‌ನಲ್ಲಿ

ಪ್ರಶ್ನಿಸಲಾಯಿತು. ಆದರೆ ಕೋರ್ಟ್ ಆಗಸ್ಟ್ ತಿಂಗಳಲ್ಲಿ ಸರ್ಕಾರದ ಪರವಾಗಿ ತೀರ್ಪನ್ನು ಕೊಟ್ಟಿತು. ಕೋರ್ಟಿನಲ್ಲಾದ ಹಿನ್ನಡೆಯ ಕಾರಣದಿಂದ ಗ್ರಾಮಸ್ಥರು ಸುಪ್ರೀಂಕೋರ್ಟಿಗೆ ಹೋಗಲು ಹಿಂಜರಿಯುತ್ತಿದ್ದಾರೆ. "ನಾವು ಒಳ್ಳೆಯ ರೀತಿಯಲ್ಲಿ ವಾದ ಮಂಡಿಸದೇ ಇದ್ದುದರಿಂದ ಸೋತೆವು. ಒಂದು ವೇಳೆ ಸುಪ್ರೀಂಕೋರ್ಟಿನಲ್ಲಿಯೂ ಸೋತುಬಿಟ್ಟರೆ ನಮ್ಮ ಹೋರಾಟ ಸತ್ತೇ ಹೋಗುತ್ತದೆ. ಆದ್ದರಿಂದ ನಾವು ಈಗ ಕೋರ್ಟ್ ಹೊರಗೆ ಹೋರಾಟಮಾಡಲು ನಿಶ್ಚಯಿಸಿದ್ದೇವೆ ಮತ್ತು ಈಗ ಅವಿರತ ಹೋರಾಟ ಫಲಕೊಡುವಂತೆ ಕಾಣಿಸುತ್ತಿವೆ" ಎಂಬುದಾಗಿ ಗ್ರಾಮಸ್ಥರು ಹೇಳುತ್ತಿದ್ದಾರೆ.

ಕೈಗಾರಿಕಾ ಕ್ಷೇತ್ರದಲ್ಲಿ ಗ್ರಾಮಗಳನ್ನು ಸೇರಿಸುವುದರ ಹಿಂದೆ ಸರ್ಕಾರದ ದುರುದ್ದೇಶವಿದೆಯೆಂದು ಗ್ರಾಮಸ್ಥರಿಗೆ ಅನಿಸುತ್ತಿದೆ. ಸರ್ಕಾರವು ಕೈಗಾರಿಕೆಗಳ ಪರವಿದೆ ಮತ್ತು ಅವುಗಳಿಗೆ ಸಹಾಯಮಾಡಬೇಕೆಂಬ ಉದ್ದೇಶ ಅದಕ್ಕಿದೆ. ಪಂಚಾಯತ್ ರಾಜ್ ವ್ಯವಸ್ಥೆ ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುವುದರಿಂದ ರಾಜ್ಯ ಸರ್ಕಾರಗಳು ಹಳ್ಳಿಗಳನ್ನು ವಿವಿಧ ಪ್ರಾಧಿಕಾರಗಳ ಅಡಿಯಲ್ಲಿ ತರಲು ಪ್ರಯತ್ನಿಸುತ್ತವೆ. ಇದರಿಂದಾಗಿ ಜನರ ಅಥವಾ ಅವರ ಪ್ರತಿನಿಧಿಗಳ ವಿರೋಧವಿಲ್ಲದೆ ಕೈಗಾರಿಕೀಕರಣಕ್ಕಾಗಿ ಜಮೀನು ಪಡೆಯಲು ಅವು ಪ್ರಯತ್ನಿಸುತ್ತವೆ. ಉತ್ತರಪ್ರದೇಶ ಸರ್ಕಾರದ ಆದೇಶ ಸಂವಿಧಾನದ ೭೩ ಮತ್ತು ೭೪ನೇ ತಿದ್ದುಪಡಿಗಳ ಆಶಯಕ್ಕೆ ವಿರೋಧವಾಗಿದೆಯೆಂದು ತಜ್ಞರು ಹೇಳುತ್ತಾರೆ. ಸಂವಿಧಾನದ ತಿದ್ದುಪಡಿಗಳ ಆಶಯದ ಪ್ರಕಾರ ಯಾವುದೇ ಒಂದು ಪ್ರದೇಶವನ್ನು ಸರ್ಕಾರ ವಶಮಾಡಿಕೊಳ್ಳಬೇಕಾದರೆ ಅದು ಪಂಚಾಯ್ತಿಯ ಅಥವಾ ಪುರಸಭೆಯ ವ್ಯಾಪ್ತಿಯಲ್ಲಿರಬೇಕೆಂದು ಹೇಳುತ್ತವೆ. ಸರ್ಕಾರ ಪ್ರಾಧಿಕಾರಗಳಂಥ ಸಮಾನಾಂತರ ಸಂಸ್ಥೆಗಳನ್ನು ಹುಟ್ಟು ಹಾಕುತ್ತಿವೆ. ಏಕೆಂದರೆ ಆ ಸಂಸ್ಥೆಗಳು ರಾಜ್ಯ ಸರ್ಕಾರಕ್ಕೆ ಬದ್ಧವಾಗಿರುತ್ತವೆ. ಆ ಸಮಾನಾಂತರ ಸಂಸ್ಥೆಗಳು ಸರ್ಕಾರದ ವಶಕ್ಕೆ ಹೋದ ಗ್ರಾಮಗಳ ಪಂಚಾಯತ್ ಸಂಸ್ಥೆಗಳನ್ನು ದುರ್ಬಲಗೊಳಿಸುತ್ತವಲ್ಲದೆ ಗ್ರಾಮಸ್ಥರ ಹಕ್ಕುಗಳನ್ನು ಬದಿಗೊತ್ತುತ್ತವೆ.

– **ಡೌನ್ ಟು ಅರ್ಥ್ ಸಾಭಾರ**

ಲೋಕವಿದ್ಯೆಗೆ ಹೆಚ್ಚಿನ ಮನ್ನಣೆ ದೊರೆಯಬೇಕಿದೆ

- ಚಿತ್ರಾ ಸಹಸ್ರಬುದ್ಧೆ

(ಎಲ್ಲರ ಆದಾಯ ನಿಶ್ಚಿತ ಮತ್ತು ನಿಯಮಿತವಾಗಬೇಕು ಮತ್ತು ಈ ಆದಾಯ ಸರ್ಕಾರಿ ನೌಕರರ ಸರಿಸಮಾನವಾಗಬೇಕು.)

ಸಮಾಜದಲ್ಲಿಯ ಜನರ ಬಳಿ ಯಾವ ಜ್ಞಾನವಿರುತ್ತದೊ ಅದು ಲೋಕವಿದ್ಯೆಂದು ಕರೆಯಲ್ಪಡುತ್ತದೆ. ಲೋಕವಿದ್ಯೆ, ಕಾಲೇಜು ಮತ್ತು ವಿಶ್ವವಿದ್ಯಾಲಯಗಳಿಂದ ಹೊರಗೆ ಸಮಾಜದಲ್ಲಿಯೇ ಇರುತ್ತದೆ. ಯಾರು ವಿಶ್ವವಿದ್ಯಾಲಯಕ್ಕೆ ಹೋಗಿರುವುದಿಲ್ಲವೊ ಅವರು ಅಜ್ಞಾನಿಗಳೇನಲ್ಲ. ಅವರು ಸಮಾಜದಿಂದ ಜ್ಞಾನ ಮತ್ತು ವಿದ್ಯೆಯನ್ನು ಸಂಪಾದಿಸಿಕೊಂಡು ತಮ್ಮ ಜೀವನ ಸಾಗಿಸುತ್ತಾರೆ. ಅವರನ್ನು ಲೋಕವಿದ್ಯೆಯ ಗುರು ಅಥವಾ ಲೋಕವಿದ್ಯಾಧರ ಎನ್ನುತ್ತಾರೆ. ರೈತ, ಎಲ್ಲ ಪ್ರಕಾರದ ಕಸಬುದಾರರು, ಆದಿವಾಸಿಗಳು, ರಿಪೇರಿಮಾಡುವವರು ಮತ್ತು ಸೇವಾ ಕಾರ್ಯಮಾಡುವವರು, ಚಿಕ್ಕ ಪುಟ್ಟ ಅಂಗಡಿದಾರರು ಮತ್ತು ಮಹಿಳೆಯರು, ಕಲಾಕಾರರು ಈ ಎಲ್ಲರು ಸಮಾಜದಿಂದ ಜ್ಞಾನಪಡೆಯುತ್ತಾರೆ ಹಾಗೂ ಈ ಜ್ಞಾನದ ಬಲದಿಂದ ತಮ್ಮ ಜೀವನವನ್ನು ಮತ್ತು ಸಮಾಜವನ್ನು ಮುನ್ನಡೆಸುತ್ತಾರೆ. ಎಲ್ಲ ಲೋಕವಿದ್ಯಾಧರರು ಸೇರಿ ಲೋಕವಿದ್ಯಾಸಮಾಜ ರಚಿಸುತ್ತಾರೆ. ಪ್ರಕೃತಿಯ ಜೊತೆ ಇರುವ ಅವರ ನೆಂಟು ಮತ್ತು ಅವರ ತಿಳುವಳಿಕೆಗಳು ಕಲೆ ಹಾಗೂ ವಿಚಾರ ಎಲ್ಲವೂ ಸೇರಿ ಉಂಟಾಗುವ ಜ್ಞಾನದ ಪ್ರಪಂಚವನ್ನೇ ಲೋಕವಿದ್ಯೆ ಎಂದೆನ್ನಲಾಗುತ್ತದೆ. ಲೋಕವಿದ್ಯೆ ಸಮಾಜದಲ್ಲಿಯೇ ಇರುವಂಥಾದ್ದು ಅದನ್ನು ಯಾವುದೇ ಪುಸ್ತಕ, ಜಾತಿ, ಧರ್ಮ, ಗ್ರಂಥಾಲಯ, ವಿಶ್ವವಿದ್ಯಾಲಯ ಅಥವಾ ಕಂಪ್ಯೂಟರಾದಿಗಳಲ್ಲಿ ಕಟ್ಟಿಹಾಕಲಾಗುವುದಿಲ್ಲ. ಇದು ಜನರ ಬಳಿಯೇ ಜೀವಂತವಾಗಿರುತ್ತದೆ ಮತ್ತು ಅವರಿಂದಲೇ ವಿಕಾಸಗೊಳ್ಳುತ್ತದೆ. ಲೋಕವಿದ್ಯೆ ನಿತ್ಯ ನವೀನವಾಗಿರುತ್ತದೆ. ತಮ್ಮ ಮತ್ತು ಸಮಾಜದ ಅಗತ್ಯಗಳಿಗೆ ಅನುಸಾರವಾಗಿ ತಮ್ಮ ಅನುಭವದ ಆಧಾರದ ಮೇಲೆ ತಮ್ಮ ತರ್ಕಬುದ್ಧಿ ಪ್ರಯೋಗಗಳ ಮೂಲಕ ಲೋಕವಿದ್ಯೆಯಲ್ಲಿ ಸತತವಾಗಿ ಸುಧಾರಣೆಗೊಳಿಸುತ್ತಲೇ ಹೋಗುತ್ತಾರೆ. ಜನಶಕ್ತಿಯ ಆಧಾರ ಲೋಕವಿದ್ಯೆಯಲ್ಲಿಯೇ ಇದೆ. ಲೋಕವಿದ್ಯೆಯ ಬಲದ ಮೇಲೆ ಕೇವಲ ಜೀವನನಡೆಸುವುದಷ್ಟೇ ಅಲ್ಲ ಪ್ರಕೃತಿಯೊಂದಿಗೂ ಮತ್ತು ಮನುಷ್ಯರೊಂದಿಗೂ ಪರಸ್ಪರ ಸಂಬಂಧವನ್ನು ಉಂಟುಮಾಡಿಕೊಳ್ಳುವುದರ ಮೂಲಕ ತಪ್ಪು - ಸರಿಯ ಪರಿಚಯಮಾಡಿಕೊಳ್ಳುತ್ತಾರೆ. ಅನ್ಯಾಯವನ್ನು ಎದುರಿಸುತ್ತಾರೆ. ಮೌಲ್ಯ ಮತ್ತು ತರ್ಕಗಳ ರಚನೆಯಿಂದ ತಮ್ಮ ವಿಶ್ವದೃಷ್ಟಿ ರೂಪಿಸಿಕೊಳ್ಳುತ್ತಾರೆ. ಲೋಕವಿದ್ಯೆಯು ಶ್ರಮ ಮತ್ತು ಬುದ್ಧಿಯನ್ನು ಬೇರೆ ಬೇರೆಯಾಗಿ ಮಾಡುವುದಿಲ್ಲ. ಅದರಲ್ಲಿ ಕೆಲವು ಕೆಲಸಗಳನ್ನು ಕೇವಲ ಶ್ರಮವೆಂದು ಭಾವಿಸದೆ ಶ್ರಮ ಮತ್ತು ಜ್ಞಾನದ ಸಮ್ಮಿಲನ ಆಗುವಂತೆ ಮಾಡಲಾಗುತ್ತದೆ. ಲೋಕವಿದ್ಯೆ ಶ್ರಮಮಾಡುವ ಯಾವುದೇ ವ್ಯಕ್ತಿಯನ್ನು ಕೇವಲ ಶ್ರಮಿಕ ಎಂದು ಭಾವಿಸದೆ ಅವನನ್ನು ಜ್ಞಾನಿವ್ಯಕ್ತಿಯಂದೇ ಪರಿಭಾವಿಸಲಾಗುತ್ತದೆ. ಸಮಾಜದಲ್ಲಿ ಹಬ್ಬಿರುವ ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆ, ಲೋಕವಿದ್ಯೆಗೆ ವಿಶ್ವವಿದ್ಯಾಲಯದ ಸರಿಸಮಾನವಾದ ಗೌರವ ಮತ್ತು ಮೌಲ್ಯ ದೊರೆತಾಗ ಮಾತ್ರ ದೂರಮಾಡಬಹುದಾಗಿದೆ.

(ಲೋಕವಿದ್ಯಾ ಆಂದೋಲನದ ಬಗ್ಗೆ ಹೆಚ್ಚಿನ ವಿವರಣೆಗಾಗಿ, Lokavidyajanandolan.blogspot.com ಇವರನ್ನು ಸಂಪರ್ಕಿಸಬಹುದು)

ಗಾಂಧೀಜಿ ಹೊಲೆದು ಕೊಟ್ಟ ಚಪ್ಪಲಿ

– ಜಿ.ಎಸ್.ಜಯದೇವ್

ದಕ್ಷಿಣ ಆಫ್ರಿಕಾದಲ್ಲಿ ಗಾಂಧೀಜಿಯವರು ಭಾರತೀಯರ ಹಿತರಕ್ಷಣೆಗಾಗಿ ಕೆಲಸ ಮಾಡಿದರು. ಹೀಗೆ ಕೆಲಸ ಮಾಡುವಾಗ ದ್ವೇಷಕ್ಕೆ ದ್ವೇಷ, ಹಿಂಸೆಗೆ ಹಿಂಸೆ ಎಂಬ ಸಾಮಾನ್ಯ ನಿಯಮಕ್ಕೆ ಹೊರತಾಗಿ ದ್ವೇಷಕ್ಕೆ ಪ್ರೀತಿಯನ್ನು ಹಿಂದಿರುಗಿಸುವ ತಮ್ಮ ಹೊಸ ವಿಧಾನವನ್ನು ಆಚರಣೆಗೆ ತಂದರು. ಇದೇ ಸತ್ಯಾಗ್ರಹದ ಮೂಲತತ್ವವಾಯಿತು. ಸತ್ಯವನ್ನು ಆಗ್ರಹಿಸಿ ಪ್ರೀತಿಯಿಂದ ಎದುರಾಳಿಯನ್ನು ಗೆಲ್ಲಬಹುದಾದ ಕಲ್ಪನೆ ಗಾಂಧೀಜಿಗೆ ಹೊಳೆದದ್ದು ದಕ್ಷಿಣ ಆಫ್ರಿಕಾದಲ್ಲೆ. ಟ್ರಾನ್ಸ್‌ವಾಲ್ ಸರ್ಕಾರ ಭಾರತೀಯರಿಗೆ ಅನ್ಯಾಯವಾಗುವ, ಅವಮಾನವಾಗುವ ಕಾನೂನುಗಳನ್ನು ಜಾರಿಗೆ ತಂದಿತು. ಈ ಅನ್ಯಾಯವನ್ನು ಪ್ರತಿಭಟಿಸಿ ಗಾಂಧೀಜಿ ಸತ್ಯಾಗ್ರಹ ಪ್ರಾರಂಭಿಸಿದರು. "ಅವರು ನನ್ನ ಶವವನ್ನು ವಶಪಡಿಸಿಕೊಳ್ಳಬಹುದೇ ಹೊರತು, ನನ್ನ ವಿಧೇಯತೆಯನ್ನಲ್ಲ, ಈ ಕಾನೂನಿಗೆ ನಾವು ಶರಣಾಗುವುದಿಲ್ಲ" ಎಂದು ದೃಢವಾಗಿ ಹೇಳಿದರು. ಪರಿಸ್ಥಿತಿ ಗಂಭೀರವಾಯಿತು. ಆದರೆ ಗಾಂಧೀಜಿ ಮಾತ್ರ ಯಾವ ಸಂದರ್ಭದಲ್ಲೂ ತಾಳ್ಮೆ ಕಳೆದುಕೊಳ್ಳಲಿಲ್ಲ. ಸ್ಥಿರವಾಗಿ ನಗುನಗುತ್ತಲೇ ಪರಿಸ್ಥಿತಿಯನ್ನು ಎದುರಿಸುತ್ತಿದ್ದರು.

ಈ ಸಂದರ್ಭದಲ್ಲಿ ಟ್ರಾನ್ಸ್‌ವಾಲ್ ಸರ್ಕಾರದ ಮುಖ್ಯಸ್ಥ ಜನರಲ್ ಸ್ಮಟ್ಸ್‌ನನ್ನು ಗಾಂಧೀಜಿ ಮುಖಾಮುಖಿಯಾಗಿ ಭೇಟಿಯಾದರು. ಇವರಿಬ್ಬರ ನಡುವೆ ನಡೆದ ಸಂಭಾಷಣೆ ಸತ್ಯ ಅಹಿಂಸೆಗಳು ಗಾಂಧೀಜಿಗೆ ಕೊಟ್ಟ ಧೈರ್ಯ, ಶಕ್ತಿಗಳನ್ನು ತೋರಿಸುತ್ತದೆ. ಗಾಂಧೀಜಿ ಜನರಲ್ ಸ್ಮಟ್ಸ್‌ಗೆ ಹೇಳಿದರು "ನಾನು ನಿಮ್ಮ ಸರ್ಕಾರದ ವಿರುದ್ಧ ಹೋರಾಡಲು ನಿರ್ಧರಿಸಿದ್ದೇನೆ. ಈ ವಿಷಯವನ್ನು ನಿಮಗೆ ತಿಳಿಸಲು ಬಂದಿದ್ದೇನೆ."

ಸ್ಮಟ್ಸ್‌ನಿಗೆ ಇದೊಂದು ತಮಾಷೆಯ ಸಂಗತಿಯಾಗಿ ಕಂಡಿರಬೇಕು. ಅವನು ಆಶ್ಚರ್ಯ ಚಕಿತನಾಗಿ ನಗುತ್ತಾ ಹೇಳಿದ – "ಏನು, ನೀವು ಈ ವಿಷಯವನ್ನು ಹೇಳಲು ಬಂದಿರಾ?" ಮತ್ತೆ ನಕ್ಕು ಹೇಳಿದ – "ನೀವು ಇನ್ನೂ ಏನನ್ನಾದರೂ ಹೇಳುವುದಿದೆಯೆ?" ಗಾಂಧೀಜಿ ಹೇಳಿದರು – "ಹೌದು, ನಾನು ಜಯಗಳಿಸುತ್ತೇನೆ" ಜನರಲ್ ಸ್ಮಟ್ಸ್‌ನಿಗೆ ಇದೊಂದು ಚೋದ್ಯವಾಗಿ ಕಂಡಿರಬೇಕು. ನಗುತ್ತಾ ಕೇಳಿದ "ಹೇಗೆ ಜಯಗಳಿಸುತ್ತೀರಿ?" ಗಾಂಧೀಜಿ ಹೇಳಿದರು "ನಿಮ್ಮ ಸಹಾಯದಿಂದ."

ದಕ್ಷಿಣ ಆಫ್ರಿಕಾದ ಸತ್ಯಾಗ್ರಹದಲ್ಲಿ ಭಾರತೀಯರೆಲ್ಲರೂ ಪಾಲ್ಗೊಂಡರು. ಸಾವಿರಾರು ಜನ ಜೈಲಿಗೆ ಹೋದರು. ಗಾಂಧೀಜಿಯನ್ನೂ ಕೂಡ ಬಂಧಿಸಿ ಜೈಲಿಗೆ ಹಾಕಿದರು.

ಗಾಂಧೀಜಿ ಜೈಲಿನಲ್ಲಿದ್ದಾಗ ಜನರಲ್ ಸ್ಮಟ್ಸ್‌ನಿಗಾಗಿ ಒಂದು ಜೊತೆ ಚಪ್ಪಲಿಯನ್ನು ಹೊಲೆದರು. ೧೯೧೪ರ ವೇಳೆಗೆ ಭಾರತಕ್ಕೆ ಹಿಂದಿರುಗುವ ಮೊದಲು ಈ ಚಪ್ಪಲಿಗಳನ್ನು ಜನರಲ್ ಸ್ಮಟ್ಸ್‌ನಿಗೆ ಉಡುಗೊರೆಯಾಗಿ ಕಳುಹಿಸಿಕೊಟ್ಟರು. ಈ ಚಪ್ಪಲಿಗಳು ಕೇವಲ ಚಪ್ಪಲಿಗಳಾಗಿರಲಿಲ್ಲ. ಗಾಂಧೀಜಿಯವರ ಸಹನೆಯ ಕುರುಹಾಗಿದ್ದವು. ತಮ್ಮ ಮನಸ್ಸಿನಲ್ಲಿ ಕಿಂಚಿತ್ತೂ ದ್ವೇಷವಿಲ್ಲವೆಂದೂ ತೋರುವ ಪ್ರೀತಿಯ ಪ್ರತೀಕವಾಗಿದ್ದವು. ಗಾಂಧೀಜಿ ಭಾರತಕ್ಕೆ ಮರಳಿದ ನಂತರ ಸ್ವತಂತ್ರ ಚಳುವಳಿಯ ನೇತಾರರಾಗಿ ಇಡೀ ವಿಶ್ವದ ಗಮನ ಸೆಳೆದರು. ಮಹಾತ್ಮ ಗಾಂಧಿಯಾದರು.

ಗಾಂಧೀಜಿ ತನಗೆ ಕೊಟ್ಟ ಚಪ್ಪಲಿಗಳನ್ನು ಜನರಲ್ ಸ್ಮಟ್ಸ್ ಉಪಯೋಗಿಸಿದ. ಬೇಸಿಗೆ ಕಾಲದಲ್ಲಿ ತನ್ನ ತೋಟದಲ್ಲಿ ನಡೆದಾಡಲು ಬಳಸುತ್ತಿದ್ದನಂತೆ, ಮಹಾತ್ಮರ ಈ ಕೊಡುಗೆಯನ್ನು ಪಡೆದು ೨೫ ವರ್ಷಗಳ ನಂತರ ಗಾಂಧೀಜಿಯ ೭೦ನೇ ಜನ್ಮದಿನದಂದು ಜನರಲ್ ಸ್ಮಟ್ಸ್ ಗಾಂಧೀಜಿಯವರಿಗೆ ಈ ಚಪ್ಪಲಿಗಳನ್ನು ಗೌರವದಿಂದ ಹಿಂದಿರುಗಿಸಿದ. ಮತ್ತು ೭೦ನೇ ವರ್ಷದ ಹುಟ್ಟುಹಬ್ಬದ ಶುಭಾಶಯ ಕೋರಿ ಹೀಗೆ ಕಾಗದ ಬರೆದ – "ನಾನು ಈ ಚಪ್ಪಲಿಗಳನ್ನು ಅನೇಕ ಬೇಸಿಗೆಗಳಲ್ಲಿ ಮೆಟ್ಟಿ ಓಡಾಡಿದ್ದೇನೆ, ಈ ಮಹಾನ್ ವ್ಯಕ್ತಿ ನಿರ್ಮಿಸಿದ ಚಪ್ಪಲಿಗಳನ್ನು ಮೆಟ್ಟುವ ಯೋಗ್ಯತೆ ಇಲ್ಲದಿದ್ದರೂ; ಈ ವ್ಯಕ್ತಿಯ ಮಹತ್ತನ್ನು ಆ ದಿನಗಳಲ್ಲೇ ಅರಿತುಕೊಂಡೆನಾದರೂ, ಗೌರವಿಸಿದೆನಾದರೂ ಅವರ ವಿರೋಧಿಯಾಗಿ ನಿಲ್ಲಬೇಕಾದದ್ದು ನನ್ನ ವಿಧಿ ಬರಹವಾಗಿತ್ತು. ಇವರು ಎಂತಹ ಬಿಗಿ ಪರಿಸ್ಥಿತಿಯಲ್ಲೂ ಸಹನೆ ಕಳೆದುಕೊಳ್ಳಲಿಲ್ಲ; ಹಿನ್ನೆಲೆಯಲ್ಲಿ ಇರುವ ಮಾನವೀಯ ಮುಖವನ್ನು ನೋಡಲು ಮರೆಯಲಿಲ್ಲ, ದ್ವೇಷಕ್ಕೆ ವಶರಾಗಲಿಲ್ಲ. ಎಂತಹ ಇಕ್ಕಟ್ಟಿನ ಸಮಯದಲ್ಲೂ ತಮ್ಮ ಲಘು ಹಾಸ್ಯವನ್ನು ಜೀವಂತವಾಗೇ ಇಟ್ಟುಕೊಂಡಿದ್ದರು. ಇವರ ರೀತಿ ನೀತಿಗಳು ಸಾಮಾನ್ಯವಾಗಿ ಆಚರಣೆಯಲ್ಲಿರುವ ನಿರ್ದಯ ಅಮಾನವೀಯ ವಿಧಾನಗಳಿಂದ ಬೇರೆಯಾಗಿಯೇ ನಿಲ್ಲುತ್ತದೆ."

ನಾಲ್ಕೂ ದಿಕ್ಕಿನಿಂದ....

ರಘುವೀರ್ ಚೌಧರಿಯುವರ ಬರವಣಿಗೆಯುಲ್ಲಿಯು ಮುಖ್ಯ ಸಂಗತಿಯೇನೆಂದರೆ ಎಲ್ಲದರಲ್ಲಿಯೂ, ಎಲ್ಲ ಹೊತ್ತಿನಲ್ಲಿಯೂ ಸತ್ಯ ಮತ್ತು ಸೌಂದರ್ಯದ ಶೋಧನವೇ ಇವರ ಬರವಣಿಗೆಯ ಮುಖ್ಯ ಕಾಳಜಿ. ರಘುವೀರ ಚೌಧರಿ ಅವರು ವಿನೋಬಾ ರವರ ಭೂದಾನ ಚಳುವಳಿಯಲ್ಲಿ ತೊಡಗಿಸಿಕೊಂಡಿದ್ದರು. ಅವರನ್ನು ಸಮಾಜ ಮುಖಿ ಮತ್ತು ಸಾಮಾಜಿಕ ನ್ಯಾಯದ ದೃಷ್ಟಿಕೋನಗಳನ್ನು ಅವರ ಬದುಕು ಮತ್ತು ಬರವಣಿಗೆಯ ಮೂಲಾಂಶವಾಗಿ ಮಾಡಿದರು.

– ಇಮ್ರಾನ್ ಸುರ್ತಿ

(ಶ್ರೀ ರಘುವೀರ ಚೌಧರಿ ಅವರು ಗುಜರಾತಿಯ ಭಾಷೆಯಲ್ಲಿ ಜ್ಞಾನಪೀಠ ಪ್ರಶಸ್ತಿ ವಿಜೇತ)

*****

ಮೋದಿಯವರ "ಮೇಕ್ ಇನ್ ಇಂಡಿಯಾ" ಪರಿಕಲ್ಪನೆಗೆ ನಮ್ಮ ತಕರಾರಿದೆ. ಮೋದಿಯವರ ಪರಿಕಲ್ಪನೆಯವರ ಪ್ರಕಾರ ವಿದೇಶದ ಕಂಪನಿಗಳು ಭಾರತಕ್ಕೆ ಬಂದು ಇಲ್ಲಿ ಉತ್ಪಾದನೆ ಆರಂಭಿಸಬೇಕು. ಆದರೆ ಅವು ತಮ್ಮ ತಂತ್ರಜ್ಞಾನವನ್ನು ಭಾರತೀಯರಿಗೆ ಕಲಿಸುವುದೂ ಇಲ್ಲ, ತಿಳಿಸುವುದೂ ಇಲ್ಲ. ನಮ್ಮ ಪ್ರಕಾರ "ಮೇಕ್ ಇನ್ ಇಂಡಿಯಾ" ಬದಲಾಗಿ "ಮೇಡ್ ಇನ್ ಇಂಡಿಯಾ" ಆಗಬೇಕು. ತಂತ್ರಜ್ಞಾನವು ದೇಶೀಯವೇ ಆಗಿರಬೇಕು. ಇದಕ್ಕೆ ಹೆಚ್ಚು ಸಮಯ ಹಿಡಿಯಬಹುದು. ಸ್ವಂತಿಕೆಗೆ ಬೆಲೆಯಿದೆ ಎಂಬುದನ್ನು ಮರೆಯಬಾರದು.

– ಅಶೋಕ್.ಕೆ.ಸಕ್ಸೇನಾ, (ಭಾರತೀಯ ವಿಜ್ಞಾನ ಸಮಾವೇಶ ಸಂಘದ ಮಾಜಿ ಅಧ್ಯಕ್ಷ)

*****

ಇಂದಿನ ಸಮಾಜವಾದಿಗಳು ಗಾಂಧಿಯವರಿಂದ ಕಲಿಯಬೇಕಾದದ್ದು ಬಹಳಷ್ಟಿದೆ. ವರ್ಗ ಸಂಘರ್ಷವನ್ನು ಪ್ರಚೋದಿಸಲಿಲ್ಲ. ಇತ್ಯಾತ್ಮಕ ಕಾರ್ಯಕ್ರಮದಲ್ಲಿ ನಂಬಿಕೆ ಇಟ್ಟಿದ್ದರು. ಗಾಂಧೀಜಿ ಬಡವರ ಪರವಾದ ನಾಯಕನಾಗಿರಲಿಲ್ಲ. ಬಡವನೇ ಅದರ ನಾಯಕನಾಗಿದ್ದರು. **– ಪ್ರಸನ್ನ**

*****

ಪುಸ್ತಕಗಳನ್ನು ಓದುವುದೆಂದರೆ ನಾವು ಮತ್ತೆ ಹುಟ್ಟಿ ಬಂದಂತೆ. ಓದು ನಮ್ಮಲ್ಲಿ ಹೊಸ ಚೈತನ್ಯ ಉಂಟುಮಾಡುವುದಲ್ಲದೆ ಹಳೆಯ ಪುಸ್ತಕಗಳಿಗೆ ಹೊಸ ಬದುಕನ್ನು ನೀಡುತ್ತದೆ. ಲೈಬ್ರೆರಿಯಲ್ಲಿ ನಮಗೆ ಸಿಕ್ಕಿರದ ಹಳೆಯ ಪುಸ್ತಕಗಳು ನಮ್ಮನ್ನು ಸ್ವಾಗತಿಸುತ್ತವೆ. ಒಂದು ಪುಸ್ತಕ ಅನಿರೀಕ್ಷಿತವಾಗಿ ಇನ್ನೊಂದು ಪುಸ್ತಕವನ್ನು ಕರೆ ತರುತ್ತದೆ. ಆಗ್ಗೆ ಕರೆತರುವ ಮೂಲಕ ಭಿನ್ನ ಶತಮಾನಗಳ ಜೊತೆ ವಿಭಿನ್ನ ಸಂಸ್ಕೃತಿಗಳ ಜೊತೆ ನಮ್ಮ ಸಂಬಂಧಗಳನ್ನು ಕುದುರಿಸುತ್ತದೆ.

– ಎಸ್. ದಿವಾಕರ್

ಸಾದರ - ಸ್ವೀಕಾರ

೧) ಪುಸ್ತಕದ ಹೆಸರು : ಶೂದ್ರರಾಗೋಣ ಬನ್ನಿ
ಲೇಖಕರು : ಪ್ರಸನ್ನ
ಪ್ರಕಾಶಕರು : ಒಂಟಿದನಿ ಪ್ರಕಾಶನ, ಕವಿಕಾವ್ಯ ಟ್ರಸ್ಟ್, ಹೊನ್ನೇಸರ ಹೆಗ್ಗೋಡು - ೫೭೭ ೪೧೭, ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ
ಬೆಲೆ : ೧೪೦/-, ಪುಟ: ೧೮೪+೪
ಪ್ರಕಟಣೆಯ ವರ್ಷ : ೨೦೧೫

ಪ್ರಚಲಿತ ಜೀವನ ಪದ್ಧತಿಗೆ ಬದಲಾಗಿ ಭಿನ್ನ ರೀತಿಯ ಜೀವನ ಪದ್ಧತಿಯ ಬಗ್ಗೆ ತೀವ್ರವಾಗಿ ಆಲೋಚಿಸುತ್ತಿರುವ ನಮ್ಮಲ್ಲಿಯ ಒಬ್ಬರಾದ ಹೆಗ್ಗೋಡಿನ ಪ್ರಸನ್ನರವರು ತಂತ್ರಜ್ಞಾನದಿಂದ ಬದುಕು ಯಂತ್ರವಾಗುತ್ತಿರುವಾಗ, ಶರೀರ ಶ್ರಮ ಸೊನ್ನೆ ಹಂತಕ್ಕೆ ಇಳಿದಿರುವಾಗ ಶ್ರಮಾಧಾರಿತ ಸರಳ ಬದುಕಿನ ಪರ್ಯಾಯವನ್ನು ಹುಡುಕುತ್ತಿರುವ ವ್ಯಕ್ತಿ ಪ್ರಸನ್ನ "ಯಂತ್ರಕಳಚೋಣ ಬನ್ನಿ" ಪುಸ್ತಕದ ಮೂಲಕ ತಮ್ಮ ಹೊಸ ದಾಟಿಯ ವಿಚಾರವನ್ನು ಸಮಾಜಕ್ಕೆ ಪರಿಚಯಿಸಿದ ಪ್ರಸನ್ನರವರು ಈಗ "ಶೂದ್ರರಾಗೋಣ ಬನ್ನಿ" ಎಂಬ ಪುಸ್ತಕದ ಮೂಲಕ ತಮ್ಮ ಶ್ರಮಾಧಾರಿತ ಸರಳ ಬದುಕಿನ ಪ್ರಮೇಯವನ್ನು ಒತ್ತಾಸೆಮೂಲಕ ಪ್ರತಿಪಾದಿಸಿದ್ದಾರೆ. ತಮ್ಮೀ ಪುಸ್ತಕ ಕುರಿತು ಅವರೇ ಹೇಳಿರುವಂತೆ ಇದೊಂದು ಶ್ರಮಸಹಿತ ಸರಳ ಬದುಕಿಗೊಂದು ಪ್ರಣಾಳಿಕೆಯಾಗಿದೆ. ಅನೇಕ ಸಮಾಜಮುಖಿ ಆಂದೋಲನಗಳ ಸೃಷ್ಟಿಕರ್ತನಾಗಿ ರಂಗಕರ್ಮಿಯಾಗಿ ದೇಸಿ ಜವಳಿ ಉದ್ಯಮದ ಸಾರಥಿಯಾಗಿ ಪಡೆದ ಅವರ ಜೀವನಾನುಭವ ಅವರ ಪ್ರೀತಿಯ ರಂಗಭೂಮಿಯಂತೆಯೇ ಬಣ್ಣಬಣ್ಣದ್ದಾಗಿದೆ. ತರಹೇವಾರಿ ಅನುಭವಗಳ ಮೂಸೆಯಿಂದ ಆರೇಳು ವರ್ಷಗಳ ಚಿಂತನೆಯಿಂದ ಬರೆದ ಈ ಪುಸ್ತಕ ಓದುಗನ ಮನಸ್ಸಿನಲ್ಲಿ ವಿಚಾರ ಕ್ರಾಂತಿಯನ್ನು ಮೂಡಿಸುವಲ್ಲಿ ಬಹಳ ಮಟ್ಟಿಗೆ ಯಶಸ್ವಿಯಾಗುತ್ತದೆ. ಉದಾಹರಣೆಗೆ ಈ ಮಾತುಗಳನ್ನು ನೋಡಿ ಹಾರುವ ಹುಳುಗಳು ಉರಿಯುವ ದೀಪಕ್ಕೆ ಬಡವರು ಯಂತ್ರ ನಾಗರೀಕತೆಯ ಆಕರ್ಷಣೆಗೆ ಬಲಿ ಬಿದ್ದಿದ್ದಾರೆ. ಏನಾದೀತೊ ಯಂತ್ರ ನಾಗರೀಕತೆಯ ಅದಮ್ಯ ಆಕರ್ಷಣೆ? ಅದು ಆಯ್ಕೆಯ ಸ್ವಾತಂತ್ರ್ಯ ಯಂತ್ರ ನಾಗರೀಕತೆ ಮೊಟ್ಟ ಮೊದಲ ಬಾರಿಗೆ ಮುನು ಕುಲಕ್ಕೆ ಅಪರಿಮಿತ ಆಯ್ಕೆಯ ಸಾಧ್ಯತೆಗಳನ್ನು ತೆರೆದು ತೋರಿಸಿತು. ವಿಶ್ವವನ್ನು ಗೆಲ್ಲಬಲ್ಲ ಹುರಿದುಂಬಿಸಿತು. ಅದು ನೀನು ನಿರಂಕುಶ ಮತಿ ನೀನು ಪ್ರಯೋಗ ಶೀಲ ಎಂದು ಹೊಗಳಿ ಪ್ರೋತ್ಸಾಹಿಸಿತು. ಹಳ್ಳಿ ತೊರೆದು ಪೇಟೆಗೆ ಬಂದು ಕೋಟ್ಯಾಧಿಪತಿಗಳಾದವರ ಪಟ್ಟಿ ಮಾಡಿ ತೋರಿಸಿತು. ಗೆದ್ದವರ ಮೆರವಣಿಗೆ ಹೊರಡಿಸಿತು. ಹಳ್ಳಿಗಳು ಹಾಳುಬಿದ್ದಿವೆ! ಬರೆಹದ ಶೈಲಿ ನಾವಿನ್ಯ ಪೂರ್ಣವಾಗಿದೆ. ಆ ಶೈಲಿಯನ್ನು ನೋಡಿದಾಗ ಗಾಂಧೀ ವಿಚಾರದ ಸಿದ್ಧವನಹಳ್ಳಿ ಕೃಷ್ಣಶರ್ಮರ ನೆನಪಾಗದೇ ಇರುವುದಿಲ್ಲ. ಈ ಪುಸ್ತಕದಲ್ಲಿಯ ಪ್ರತಿಯೊಂದು ಅಧ್ಯಾಯದ ಶೀರ್ಷಿಕೆ ಮತ್ತು ಪ್ರತಿಯೊಂದು ವಾಕ್ಯ ಆಕರ್ಷಕವಾಗಿವೆ ಮತ್ತು ಅರ್ಥವತ್ತಾಗಿವೆ. ವಿಷಯದ ಮಂಡನೆ ಪ್ರಾಪಂಚಿಕವೂ ಮತ್ತು ಆಧ್ಯಾತ್ಮವು ಕೂಡಿಕೊಂಡು ಹೊರಹೊಮ್ಮಿದೆ.

ಉದಾಹರಣೆಗೆ ಈ ವಾಕ್ಯವನ್ನು ನೋಡಿ ಶ್ರಮವೂ ಯೋಗವೂ ಹೌದು, ಧ್ಯಾನವೂ ಹೌದು ಶ್ರಮಕ್ಕೂ ಆಧ್ಯಾತ್ಮಕ್ಕೂ ಗಾಢವಾದ ನಂಟಿದೆ. ಶ್ರಮವೆಂಬುದು ಬದುಕಿನ ಒಳ ಹೊರಗುಗಳನ್ನು ಬಂಧಿಸಿ ಹಿಡಿದಿಡುತ್ತದೆ. ಶ್ರಮದ ವೃತ್ತಿಗಳಲ್ಲಿ ತಾದಾತ್ಮ್ಯಭಾವ ಅಥವಾ ಏಕಾಗ್ರತೆ ಸಾಧ್ಯವಿದೆ. ಹಾಗೆಂದೆ ವಚನಕಾರರು ಸಂತರು ಫೀರರು ಶ್ರಮದ ವೃತ್ತಿಗಳನ್ನೇ ತಪಸ್ಸಾಗಿ ಸ್ವೀಕರಿಸಿದರು. ಕಾಯಕವನ್ನೇ ಧ್ಯಾನವಾಗಿಸಿದರು. ಇಹದ ಲಾಭ ಮತ್ತು ಪರದ ಲಾಭ ಎರಡನ್ನೂ ವೃತ್ತಿಯಿಂದಲೇ ಪಡೆದರು. ಆದರೆ ಯಂತ್ರ ಕಾರ್ಮಿಕರು ಇದಕ್ಕೆ ತದ್ವಿರುದ್ಧವಾಗಿ ಇಹದ ಲಾಭ ಮತ್ತು ಪರದ ಲಾಭ ಎರಡರಿಂದಲೂ ವಂಚಿತರಾಗಿ ವ್ಯಾಕುಲ ಚಿತ್ತರಾದರು. ಎಲ್ಲ ಧರ್ಮಗಳ ಎಲ್ಲ ಸಂತರೂ ಒಂದಲ್ಲ ಒಂದು ಕೈ ಯಂತ್ರವನ್ನು ಧ್ಯಾನದ ಸಾಧನವನ್ನಾಗಿ ಬಳಸಿಕೊಂಡರು. ಏನಿಲ್ಲದಿದ್ದರೂ ಜಪಮಣಿಯೆಂಬ ಉಪಕರಣವಂತೂ ಇದ್ದೇ ಇತ್ತು. ಸಂತ ರವಿದಾಸ ಚಮ್ಮಾರಿಕೆಯ ಕಾಯಕವನ್ನು ಧ್ಯಾನದ ಸಾಧನವಾಗಿ ಮಾಡಿಕೊಂಡ, ಸಂತ ಕಬೀರ ಮಗ್ಗವನ್ನು ಧ್ಯಾನದ ಸಾಧನವಾಗಿ ಮಾಡಿಕೊಂಡ, ಭಕ್ತ ಕುಂಬಾರ ಕುಂಬಾರಿಕೆಯನ್ನು ಧ್ಯಾನದ ಸಾಧನವಾಗಿ ಮಾಡಿಕೊಂಡ, ಗಾಂಧೀಜಿ ನೂಲುವ ಚರಕವನ್ನು ಧ್ಯಾನದ ಸಾಧನವಾಗಿ ಮಾಡಿಕೊಂಡರು, ಟಾಲ್‌ಸ್ಟಾಯ್ ಚಪ್ಪಲಿ ಹೊಲೆಯುವ ಮೂಲಕ ತನ್ನ ನಂಬಿಕೆಯನ್ನು ಹಿಂದಕ್ಕೆ ಪಡೆದ. ರಾಮಾಯಣವನ್ನು ಇವತ್ತಿನ ಪರಿಸ್ಥಿತಿಗೆ ಬಹಳ ಪರಿಣಾಮಕಾರಿಯಾಗಿ ರೂಪಕವಾಗಿ ಉಪಯೋಗಿಸಿದ್ದಾರೆ. ಇವತ್ತಿನ ಮಹಾನಗರಗಳು ರಾವಣನ ಲಂಕಾಪಟ್ಟಣದಂತಾಗಿವೆ ಎಂಬುದನ್ನು ರಾಮಾಯಣದಲ್ಲಿಯ ಆ ನಗರದ ವರ್ಣನೆಯ ಆಧಾರದ ಮೇಲೆ ಸೂಕ್ಷ್ಮವಾಗಿ ತಿಳಿಸಿದ್ದಾರೆ. ಅದನ್ನು ನಗರ ಪ್ರೇಮಿಗಳು ಅರ್ಥಮಾಡಿಕೊಂಡಷ್ಟು ಅವರಿಗೂ ಕ್ಷೇಮ ದೇಶಕ್ಕೂ ಕ್ಷೇಮ.

ಈ ಪುಸ್ತಕದಲ್ಲಿ ಗ್ರಾಮೋದ್ಯೋಗ ಆಂದೋಲನಕ್ಕೆ ಸಂಬಂಧಿಸಿದ ವಿಷಯಗಳಿಗಾಗಿ ಪ್ರತ್ಯೇಕ ಭಾಗವೊಂದಿದೆ. ಅದರಲ್ಲಿ ಲೇಖಕರು ತಾವು ಸ್ಥಾಪಿಸಿದ ಚರಕ ಸಂಸ್ಥೆಯ ಬಗ್ಗೆಯೂ ಮತ್ತು ಗ್ರಾಮೋದ್ಯೋಗದ ಉಳಿಸುವಿಕೆಯಲ್ಲಿ ಮತ್ತು ಅದನ್ನು ಪುನಃ ಕಟ್ಟುವುದರಲ್ಲಿ ತಾವು ಮಾಡಿದ ಪ್ರಯತ್ನ ಮತ್ತು ಸಿಹಿ - ಕಹಿ ಅನುಭವಗಳ ವಿಷಯವನ್ನು ಮನತಟ್ಟುವಂತೆ ಚಿತ್ರಿಸಿದ್ದಾರೆ. ಸಮಾಜ ವ್ಯವಸ್ಥೆ; ಎಂಬ ಪ್ರಕರಣದಲ್ಲಿ ಶ್ರಮಜೀವನ ಮತ್ತು ದುಡಿಯುವ ವಾತಾವರಣದ ಸೊಬಗನ್ನು ಪ್ರಕೃತಿಯಲ್ಲಿ ಕಾಣಬಹುದೆಂದು ಹೇಳುತ್ತಾ ಇರುವೆ, ಗೆದ್ದಲು, ಜೇನುಹುಳು ಮುಂತಾದವುಗಳ ಶ್ರಮನಿಷ್ಠ ದುಡಿಮೆಯ ಮತ್ತು ಸಹಕಾರದ ಪಾಠವನ್ನು ಕಲಿಯಬಹುದೆಂದು ಹೇಳಿರುವುದು ಪ್ರಕೃತಿಯಿಂದ ದೂರವಾಗಿರುವ ಜನರ ಕಣ್ಣು ತೆರೆಸುವಂಥ ಮಾತುಗಳಾಗಿವೆ. ಒಟ್ಟಾರೆ ಪ್ರಸನ್ನರವರ ಶೂದ್ರರಾಗೋಣ ಬನ್ನಿ ಪುಸ್ತಕದ ಮೂಲಕ ಹೊಸ ಸಮಾಜ ವ್ಯವಸ್ಥೆಯ ನಿರ್ಮಾಣದ ಜರೂರಿನ ಬಗ್ಗೆ ಎಲ್ಲರ ಗಮನ ಸೆಳೆದಿದ್ದಾರೆ. ಅವರ ಈ ಮೊದಲಿನ ಪುಸ್ತಕ "ಯಂತ್ರಗಳನ್ನು ಕಳಚೋಣ ಬನ್ನಿ" ಕೂಡ ಇಂದಿನ ಜೀವನ ಪದ್ಧತಿಗೆ ವಿರೋಧವಾದ ವಿಚಾರಗಳಿಂದ ಕೂಡಿದ್ದರೂ ಆ ಪುಸ್ತಕದಲ್ಲಿಯ ವಿಚಾರಗಳಿಗೆ ಪ್ರತಿರೋಧ ಹೇಳುವ ಯಾವ ಪ್ರತಿಕ್ರಿಯೆಯು ಇದುವರೆಗೆ ಬಂದಿಲ್ಲ. ಅವರ ಈ ಹೊಸ ಪುಸ್ತಕಕ್ಕೂ ವಿರೋಧಾತ್ಮಕ ಪ್ರತಿಕ್ರಿಯೆಯನ್ನು ಕುತೂಹಲದಿಂದ ನಿರೀಕ್ಷಿಸಬಹುದಾಗಿದೆ. ಒಂದು ವೇಳೆ ಅಂಥ ವ್ಯತಿರಿಕ್ತ ಅಭಿಪ್ರಾಯಗಳು ಬರದಿದ್ದಲ್ಲಿ ಪ್ರಸನ್ನರವರ ವಿಚಾರಗಳ ಪಾಲನೆ ಇಂದು ಅತ್ಯಗತ್ಯವಾಗಿದೆ ಎಂದೇ ಭಾವಿಸಬೇಕಾಗುತ್ತದೆ.

ಜನಪದ ಸೇವಾ ಟ್ರಸ್ಟ್ ಸಮಾಚಾರ

ಕಳೆದ ಜನವರಿ ೩ ಜನಪದ ಸೇವಾ ಟ್ರಸ್ಟ್ ೨ನೇ ಬಾರಿಗೆ ವಿಶೇಷ ಸಂತಸದ ಸಮಾರಂಭವನ್ನು ಆಯೋಜಿಸಿತ್ತು. ಕಳೆದ ೩ವರ್ಷಗಳಿಂದ ಟ್ರಸ್ಟ್ ನಡೆಸುತ್ತಿರುವ ದತ್ತು ಕೇಂದ್ರದ ಮೂಲಕ ಕೇಂದ್ರ ಸರ್ಕಾರದ ಕಾನೂನಿನ ಅನ್ವಯ ಅನಾಥ ಮಕ್ಕಳನ್ನು ದತ್ತು ಪಡೆದ ತಂದೆ ತಾಯಿಗಳ ಸಮಾವೇಶವನ್ನು ಏರ್ಪಡಿಸಲಾಗಿತ್ತು. ದತ್ತು ಹೋದ ಮಕ್ಕಳು ಸಹ ಬಂದಿದ್ದರು. ಸುಮಾರು ೫೦ ಜನ ಸೇರಿದ್ದರು. ಸಮಾರಂಭದಲ್ಲಿ ಮಕ್ಕಳ ತಜ್ಞರಾದ ಮೈಸೂರಿನ ಡಾ.ಶೆಣ್ಯೆ ಮತ್ತು ಕಾನೂನು ತಜ್ಞರಾದ ಬೆಂಗಳೂರಿನ ಆಂತೋಣಿಯವರು ಹಾಜರಿದ್ದು ದತ್ತು ಕೊಡುವ ಪ್ರಕ್ರಿಯೆಯಲ್ಲಿಯ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿದರು. ಮುಕ್ತಾಯ ಸಮಾರಂಭದಲ್ಲಿ ಪ್ರದೇಶದ ಉಪವಿಭಾಗಾಧಿಕಾರಿಗಳು ಡಾ.ಹೆಚ್.ಎನ್.ನಾಗರಾಜುರವರು ಬಂದು ಮಕ್ಕಳೊಂದಿಗೂ ಮತ್ತು ತಂದೆ ತಾಯಿಗಳೊಂದಿಗೂ ಸಂತೋಷ ಚಿತ್ತರಾಗಿ ಎಲ್ಲರೊಂದಿಗೆ ಮಿಡಿತವಾದರು. ಟ್ರಸ್ಟಿನ ನೂತನ ಅಧ್ಯಕ್ಷರಾದ ಶ್ರೀ.ಜನಾರ್ಧನ್ ಮತ್ತು ಹಿರಿಯ ಧರ್ಮದರ್ಶಿ ಶ್ರೀ.ಹೆಚ್.ಎನ್.ರಮೇಶ್‌ರವರು ಹಾಜರಿದ್ದರು. ದತ್ತು ಪಡೆದ ತಂದೆ ತಾಯಂದಿರು ತಮ್ಮ ಅನುಭವಗಳನ್ನು ಹೇಳಿದರು. ಮಗುವನ್ನು ದತ್ತು ತೆಗೆದುಕೊಂಡಾದ ಮೇಲೆ ಅವರ ಜೀವನ ದೃಷ್ಟಿ ಬದಲಾದ ಬಗ್ಗೆ ಮತ್ತು ಉಂಟಾದ ಸಂತೋಷದ ಬಗ್ಗೆ ಹೃದಯ ಪೂರ್ವಕವಾಗಿ ಮಾತನಾಡಿದರು. ದತ್ತು ಹೋದ ಮಕ್ಕಳು ಈಗ ದೊಡ್ಡವರಾಗಿ ಶಿಶುವಿಹಾರಕ್ಕೆ ಹೋಗುತ್ತಿದ್ದಾರೆ. ಆ ಮಕ್ಕಳಲ್ಲಿ ಕೆಲವರು ತಾವು ಕಲಿತ ಶಿಶುಗೀತೆಗಳನ್ನು ಹಾಡಿ ಎಲ್ಲರನ್ನು ಮನರಂಜಿಸಿದರು. ಸುಮಾರು ೩ಗಂಟೆಗಳ ಕಾಲ ನಡೆದ ಈ ಸಮಾವೇಶ ಸಾಮೂಹಿಕ ಛಾಯಾ ಚಿತ್ರದೊಂದಿಗೆ ಮತ್ತು ಭೋಜನದೊಂದಿಗೆ ಮುಕ್ತಾಯವಾಯಿತು.

******

ಭಾರತೀಯ ಕುಶಲಕಲೆ ಮತ್ತು ವಿನ್ಯಾಸ ಸಂಸ್ಥೆ (INDIAN INSTITUTE OF CRAFTS AND DESIGEN) ಸಂಸ್ಥೆಯಲ್ಲಿ ಎಮ್.ಎ ಗೆ ಸರಿಸಮಾನವಾದ ಡಿಪ್ಲೋಮಾ ಮಾಡಿರುವ ಗುಜರಾತಿನ ಮೇಧಾ ಷಾ ಎಂಬ ವಿದ್ಯಾರ್ಥಿನಿ ಟ್ರಸ್ಟಿಗೆ ಬಂದು ಟ್ರಸ್ಟಿನಲ್ಲಿ ನಡೆಯುತ್ತಿರುವ ಖಾದಿ ಬಟ್ಟೆ ಮತ್ತು ಬಣ್ಣ ಹಾಕುವ ಬಗ್ಗೆ ತಿಳಿದುಕೊಂಡರು.

******

ಮೈಸೂರಿನ ನಿವೃತ್ತ ಅಧ್ಯಾಪಕಿ ಸರಸ್ವತಿಯುವರು ಟ್ರಸ್ಟಿಗೆ ತಮ್ಮ

ಆತ್ಮೀಯರೊಂದಿಗೆ ಭೇಟಿಕೊಟ್ಟು ಟ್ರಸ್ಟಿನ ಗೌರವಾಧ್ಯಕ್ಷರನ್ನು ಫಲಪುಷ್ಪಗಳೊಂದಿಗೆ ಗೌರವಿಸಿದರು ಹಾಗೂ ಹತ್ತು ಸಹಸ್ರರೂಗಳನ್ನು ಸಮರ್ಪಿಸಿದರು. ಟ್ರಸ್ಟಿನ ಅಭಿಮಾನಿ ಯುವ ಮಿತ್ರರಾದ ವಿ.ಗಣೇಶ್‌ರವರು ಉಪಸ್ಥಿತರಿದ್ದರು. ಸರಸ್ವತಿಯವರಿಗೆ ಕೃತಜ್ಞತೆಗಳು.


******

ಕರ್ನಾಟಕ ವಿದ್ಯುತ್ ಮಂಡಲಿಯಲ್ಲಿ ಅಧಿಕಾರಿಯಾಗಿರುವ ಶ್ರೀ.ಎನ್.ಎಮ್.ಅನಂತಮೂರ್ತಿಯವರು ಟ್ರಸ್ಟಿನ ಕಾರ್ಯಕಲಾಪಗಳನ್ನು ತಿಳಿದು ಟ್ರಸ್ಟಿಗೆ ಹತ್ತು ಸಾವಿರ ರೂಪಾಯಿಗಳ ದಾನ ಮಾಡಿದರು. ಅನಂತ ಮೂರ್ತಿಯವರಿಗೆ ಟ್ರಸ್ಟ್ ಆಭಾರಿಯಾಗಿದೆ.

******

ಜನಪದ ಸೇವಾ ಟ್ರಸ್ಟಿನ ೨೦೧೫–೧೬ನೇ ಸಾಲಿನ ವಾರ್ಷಿಕ ಸರ್ವಸದಸ್ಯರ ಸಭೆ ಕಳೆದ ಡಿಸೆಂಬರ್ ೨೭ರಂದು ಮೇಲುಕೋಟೆಯ ಜನಪದ ನಿಲಯದಲ್ಲಿ ನಡೆಯಿತು. ಟ್ರಸ್ಟಿನ ಅಧ್ಯಕ್ಷರಾದ ಡಾ.ಎಮ್.ಸಿ.ಮನೋಹರ್ ಅಧ್ಯಕ್ಷತೆ ವಹಿಸಿದ್ದರು. ಸಭೆಯಲ್ಲಿ ೨೦೧೪–೧೫ನೇ ಸಾಲಿನ ಆಡಿಟ್ ಆದ ಲೆಕ್ಕ ಪತ್ರಗಳನ್ನು ಹಾಗೂ ಆ ವಾರ್ಷಿಕ ವರದಿಯನ್ನು ಸಮರ್ಪಕವಾಗಿ ಮಂಡಿಸಿದ್ದನ್ನು ಓದಿ ಒಪ್ಪಲಾಯಿತು. ೨೦೧೪–೧೫ನೇ ಸಾಲಿಗೆ ಒಟ್ಟು ೨೩,೪೫,೯೪೯ರಷ್ಟು ವ್ಯವಹಾರವಾಗಿದೆ ಮತ್ತು ೨ಲಕ್ಷದಷ್ಟು ಆದಾಯವನ್ನು ಹೊಂದಿದೆ. ಈ ಲೆಕ್ಕದಲ್ಲಿ ಟ್ರಸ್ಟಿನ ಎಲ್ಲ ವಿಭಾಗದ ಲೆಕ್ಕ ಪತ್ರಗಳು ಕ್ರೋಢೀಕೃತವಾಗಿವೆ. ೨೦೧೬–೧೭ ನೇ ಸಾಲಿಗೆ ಹೊಸ ಕಾರ್ಯಕಾರಿ ಮಂಡಳಿಯ ರಚನೆಯಾಗಿ ಟ್ರಸ್ಟಿನ ಅಧ್ಯಕ್ಷರಾಗಿ ಶ್ರೀ.ಜನಾರ್ಧನ್‌ರವರು ಆಯ್ಕೆಗೊಂಡರು. ಇದುವರೆಗೆ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ ಡಾ.ಮನೋಹರ್‌ರವರಿಗೆ ಕೃತಜ್ಞತೆ ಸಲ್ಲಿಸಲಾಯಿತು.

ಖಾದಿ ವಿಚಾರ



"ಮೇಲುಕೋಟೆ ಬ್ಯಾಗ್" ಎಂಬ ಹೆಸರಿನಲ್ಲಿ ರಾಜ್ಯಾದ್ಯಂತ ಹಾಗೂ ವಿದೇಶಗಳಲ್ಲಿ ಜನಪ್ರಿಯವಾಗಿದ್ದ ಸುಭದ್ರ ಹಾಗೂ ಸುಂದರ ವಿನ್ಯಾಸದ ಹೆಗಲುಚೀಲದ ಉತ್ಪಾದನೆ ಕೆಲ ವರ್ಷಗಳಿಂದ ಅನೇಕ ತೊಡಕುಗಳಿಂದಾಗಿ ಸ್ಥಗಿತ ಗೊಂಡಿತ್ತು. ಹೆಗಲು ಚೀಲಕ್ಕಾಗಿ ಬೇಡಿಕೆ ಬರುತ್ತಲೇ ಇತ್ತು. ತುಂಬಾ ಉಪಯುಕ್ತವಾಗಿದ್ದ ಹೆಗಲು ಚೀಲವನ್ನು ಅನೇಕರು ಬಹಳ ಜತನದಿಂದ ಕಾಯ್ದಿಟ್ಟುಕೊಂಡು ಬಂದಿದ್ದಾರೆ. ಐದು ವರ್ಷಗಳ ಉಪಯೋಗದ ನಂತರವೂ ಸದೃಢವಾಗಿ ಉಳಿಯುವ ಆ ಹೆಗಲುಚೀಲದ ಬಗ್ಗೆ ಅನೇಕರು ಹೆಮ್ಮೆಯ ಈ ಮಾತುಗಳನ್ನು ಹೇಳಿದ್ದಾರೆ. ರಂಗಭೂಮಿಯ ಕಲಾವಿದರಿಗೂ ಅದು ಪ್ರಿಯವಾಗಿತ್ತು. ಆದ್ದರಿಂದ ಅದು ರಂಗಭೂಮಿ ಮತ್ತು ಚಲನಚಿತ್ರಗಳಲ್ಲಿಯೂ ಪಾತ್ರಧಾರಿಗಳ ಮೂಲಕ ಕಾಣಿಸಿಕೊಂಡಿತು. ಅಂಥ ಜನಪ್ರಿಯ ಹೆಗಲು ಚೀಲದ ಉತ್ಪಾದನೆ ಪುನರ್ ಪ್ರಾರಂಭವಾಗಿದೆ ಎಂದು ತಿಳಿಸಲು ಸಂತೋಷವೆನಿಸುತ್ತದೆ. ಚೀಲದ ಉತ್ಪಾದನೆಗಾಗಿ ಸದ್ಯ ಎರಡು ಸುಧಾರಿತ ಮಗ್ಗಗಳು ಕೆಲಸ ಮಾಡುತ್ತಿವೆ. ಚೀಲಗಳು ಇಷ್ಟರಲ್ಲಿಯೇ ಮಾರುಕಟ್ಟೆಗೆ ಖಾದಿ ಭಂಡಾರಗಳ ಮೂಲಕ ಬರಲಿವೆ. ಕಳೆದ ಡಿಸೆಂಬರ್ ತಿಂಗಳಲ್ಲಿ ಒಂದು ಸಾವಿರ ಮೀಟರ್‌ಗಳಷ್ಟು ಖಾದಿ ಬಟ್ಟೆ ಮತ್ತು ೫೦ಟವೆಲ್‌ಗಳು ಮತ್ತು ೨೦ದುಪ್ಪಟ್ಟಗಳು ಉತ್ಪಾದನೆಯಾಗಿವೆ. ನೇಕಾರರು ಸರಾಸರಿ ೫,೦೦೦ ರೂಪಾಯಿಗಳಷ್ಟು ಹಣವನ್ನು ಸಂಪಾದನೆ ಮಾಡಿದ್ದಾರೆ. ನೈಸರ್ಗಿಕ ಬಣ್ಣ ಹಾಕುವುದರಲ್ಲಿ ಸುಧಾರಣೆ ಕಂಡುಕೊಳ್ಳಲಾಗಿದೆ. ಮೇಲುಕೋಟೆಯಲ್ಲಿರುವ ಜನಪದಖಾದಿ ಎಂಬ ಭಂಡಾರದಲ್ಲಿ ಡಿಸೆಂಬರ್ ತಿಂಗಳಲ್ಲಿ ೨೦,೦೦೦ರಷ್ಟು ಖಾದಿ ಬಟ್ಟೆ ಮಾರಾಟವಾಗಿದೆ.

ಸರ್ವೋದಯ ಆಂದೋಲನದ ಮುನ್ನಡೆ

ವಿಷಯ : ರಾಜ್ಯ ಲೋಕಸೇವಕ ಮತ್ತು ಸರ್ವೋದಯ ಮಿತ್ರರ ಚಿಂತನಾ ಸಭೆ.

ರಾಜ್ಯದ ವಿವಿಧ ಜಿಲ್ಲೆಗಳಾದ್ಯಂತ ನೂರು ಜನ ಲೋಕಸೇವಕರು ಮತ್ತು ಸರ್ವೋದಯ ಮಿತ್ರರಿದ್ದಾರೆ. ಸದಸ್ಯತ್ವ ಪಡೆದಾಗಿನಿಂದ ಲೋಕಸೇವಕರು ಮತ್ತು ಸರ್ವೋದಯ ಮಿತ್ರರು ಒಂದೆಡೆ ಸೇರಿ ಪರಸ್ಪರ ಭೇಟಿಯಾಗುವ, ಪರಿಚಯ ಮಾಡಿಕೊಳ್ಳುವ ಮತ್ತು ರಾಜ್ಯದಲ್ಲಿ ಸರ್ವೋದಯ ಆಂದೋಲನ ಕಟ್ಟುವ ಬಗ್ಗೆ ವಿಚಾರ ವಿನಿಮಯ ಮಾಡುವ ಅವಕಾಶವಾಗಿಲ್ಲ. ಎಲ್ಲರೂ ಒಟ್ಟಿಗೆ ಕೂಡಿ ಸಂಘಟನೆಯನ್ನು ಬೆಳೆಸುವುದು ಅಗತ್ಯವಾಗಿದೆ.

ಈ ಉದ್ದೇಶವನ್ನು ಗಮನದಲ್ಲಿರಿಸಿಕೊಂಡು ಬರುವ ಫೆಬ್ರವರಿ ಮೊದಲ ವಾರದಲ್ಲಿ ಬೆಳಿಗ್ಗೆ ೧೧ರಿಂದ ಸಂಜೆ ೫ರವರೆಗೆ ಮಂಡ್ಯ ಜಿಲ್ಲಾ ಮೇಲುಕೋಟೆಯ ಜನಪದ ಸೇವಾ ಟ್ರಸ್ಟ್ ಆವರಣದಲ್ಲಿ ಸರ್ವೋದಯ ಚಿಂತನಾ ಸಭೆಯನ್ನು ಏರ್ಪಡಿಸಲಾಗಿದೆಯೆಂದು ತಿಳಿಸಲು ಸಂತೋಷವೆನಿಸುತ್ತದೆ.

ನೀವು ಲೋಕಸೇವಕ/ಸರ್ವೋದಯ ಮಿತ್ರರಾಗಿರುವುದರಿಂದ ಚಿಂತನಾ ಸಭೆಯಲ್ಲಿ ನಿಶ್ಚಿತವಾಗಿ ಭಾಗವಹಿಸಬೇಕೆಂದು ವಿನಂತಿಸುತ್ತೇವೆ. ನಿಮ್ಮ ನಿಮ್ಮ ಕ್ಷೇತ್ರಗಳಲ್ಲಿ ಸರ್ವೋದಯ ಆಂದೋಲನ ಬಲಪಡಿಸುವ ದೃಷ್ಟಿಯಿಂದ ಸರ್ವೋದಯ ಚಿಂತನಾ ಸಭೆಯಲ್ಲಿ ನಿಮ್ಮ ಭಾಗವಹಿಸುವಿಕೆ ಮುಖ್ಯವೂ, ಅಗತ್ಯವೂ ಆಗುತ್ತದೆ.


ದೂರದಿಂದ ಬರುವ ಸದಸ್ಯರು ಇಷ್ಟ ಪಟ್ಟಲ್ಲಿ ಅವರಿಗೆ ಹಿಂದಿನ ರಾತ್ರಿ ಉಳಿದುಕೊಳ್ಳುವ ವ್ಯವಸ್ಥೆ ಮಾಡಲಾಗುವುದು. ಆ ಬಗ್ಗೆ ಅವರು ಪ್ರತ್ಯೇಕವಾಗಿ ತಿಳಿಸಬೇಕಾಗಿ ಕೋರಿಕೆ. ಬರುವುದನ್ನು ಜನವರಿ ೩೦ರ ಒಳಗಾಗಿ ತಿಳಿಸಬೇಕಾಗಿ ವಿನಂತಿ. ನಿಮ್ಮ ಉತ್ತರವನ್ನು ನಿರೀಕ್ಷಿಸುತ್ತಿದ್ದೇವೆ.

ಸಂಪರ್ಕ ಸಂಖ್ಯೆ
ಎಲ್. ನರಸಿಂಹಯ್ಯ - ೯೮೮೦೮ ೮೭೭೯೪
ಹೆಚ್.ಎಸ್.ಸುರೇಶ್- ೯೪೪೮೦ ೨೭೪೦

ನಿಮ್ಮ ಕ್ಷೇಮಾಭಿಲಾಷಿ

(ಸುರೇಂದ್ರ ಕೌಲಗಿ)
ಅಧ್ಯಕ್ಷರು,
ಕರ್ನಾಟಕ ಸರ್ವೋದಯ ಮಂಡಲಿ
೯೧೪೧೭ ೦೦೮೧೨

ಜನಪದ ನಿಲಯದ ಅಂತರಂಗದಲ್ಲಿ - ೧೪೨



ಸಮಾಜ ಸೇವಕರಿಗೆ ಸಮಾಜದ ಋಣ ಬಹುದೊಡ್ಡದಾಗಿರುತ್ತದೆ. ಯಾವುದೇ ರಾಜಕೀಯ ಸ್ಥಾನಮಾನವಿಲ್ಲದೇ, ಯಾವುದೇ ಚರ - ಸ್ಥಿರ ಆಸ್ತಿಯಿಲ್ಲದೆ, ಯಾವುದೇ ವಿಶಿಷ್ಟ ಪಂಗಡದ ನೆರವಿಲ್ಲದೆ, ಯಾವುದೇ ತಿಂಗಳ ಆದಾಯವಿಲ್ಲದೆ ಕೆಲಸಮಾಡುವ ಸಮಾಜಸೇವಕನ ಬದುಕು ಸಮಾಜದ ಸಹಸ್ರಾರು ಹಸ್ತಗಳ ಸಹಾಯದಿಂದ ರೂಪುಗೊಳ್ಳುತ್ತದೆ. ಪ್ರತಿಕ್ಷಣವೂ ಸಮಾಜದ ಋಣ ಅನುಭವವಾಗುತ್ತಿರುತ್ತದೆ. ಜನಪದ ಸೇವಾ ಟ್ರಸ್ಟ್ ಕಟ್ಟುವಾಗ ಮತ್ತು ಅದನ್ನು ಮುನ್ನಡೆಸುವಾಗ ಸಮಾಜದ ಸಹಾಯದ ಅನುಭವ ಪ್ರತಿ ಹೆಜ್ಜೆಗೂ ಆಗುತ್ತಿತ್ತು. ಬರಿಗೈಯಿಂದಲೇ ಪ್ರಾರಂಭವಾದ ಟ್ರಸ್ಟ್ ಈಗ ಪ್ರೌಢವಾಗಿ ಬೆಳೆಯಲು ಸಾಧ್ಯವಾಗಿರುವುದಕ್ಕೆ ಸುತ್ತಲಿನ ಸಮಾಜದ ಜನರ ಸಹಾನುಭೂತಿ ದೊಡ್ಡ ಕಾರಣವಾಗಿದೆ. ಸಂಸ್ಥೆಯ ಬೆಳವಣಿಗೆಯೊಂದಿಗೆ ಸ್ವಂತ ಸಂಸಾರದ ಹೊಣೆಯೂ ಬೆಳೆಯುತ್ತಾ ಬಂದಾಗ ಸಮಾಜದ ಸಹಾಯ ಒದಗಿ ಬರದಿದ್ದರೆ ಪ್ರಗತಿ ಕುಂಠಿತವಾಗುತ್ತದೆ. ಅಂಥ ಪ್ರಸಂಗ ಟ್ರಸ್ಟ್ ಪ್ರಾರಂಭವಾಗಿ ೫೬ ವರ್ಷಗಳಷ್ಟು ದೀರ್ಘಕಾಲದಲ್ಲಿ ಬರಲಿಲ್ಲ ಎಂಬುದು ಸಮಾಜದ ಜೀವಂತಿಕೆಯ ಸಾಕ್ಷಿಯಾಗಿದೆ. ಜನಪದ ಸೇವಾ ಟ್ರಸ್ಟ್ ತನ್ನ ಜೀವಿತದ ೫೦ ವರ್ಷಗಳನ್ನು ಕಳೆದು ೫೬ನೇ ವರ್ಷದಲ್ಲಿ ಪದಾರ್ಪಣೆ ಮಾಡುತ್ತಿರುವ ಸುಸಂದರ್ಭದಲ್ಲಿ ಟ್ರಸ್ಟಿಗೆ ಸಹಾಯಮಾಡಿದ ನೂರಾರು ಅಜ್ಞಾತ ವ್ಯಕ್ತಿಗಳ ಸಹಾಯವನ್ನು ಕೃತಜ್ಞತಾ ಭಾವದಿಂದ ನೆನೆಯುವುದರಲ್ಲಿ ಸಂತೋಷವೆನಿಸುತ್ತದೆ. ಅವರೆಲ್ಲರಿಗೆ ಕೃತಜ್ಞತೆ ಸಲ್ಲಿಸುವುದರಲ್ಲಿ ಅತ್ಯಂತ ತೃಪ್ತಿ ಭಾವ ಅನುಭವಕ್ಕೆ ಬರುತ್ತದೆ. ಎಲ್ಲರಿಗೂ ತಿಳಿದಂತೆ ವಿದ್ಯಾಭ್ಯಾಸಕ್ಕೆ ಮೈಸೂರು ನಗರ ಪ್ರಶಸ್ತ ಸ್ಥಾನ. ಮೇಲುಕೋಟೆಯಲ್ಲಿ ಸರ್ಕಾರಿ ಶಾಲೆಯಲ್ಲಿ ಕನ್ನಡ ಮಾಧ್ಯಮದಲ್ಲಿ ಓದಿದ ಮಕ್ಕಳು ಮುಂದಿನ ವ್ಯಾಸಂಗಕ್ಕೆ ಮೈಸೂರಿಗೆ ಹೋಗುವುದು ಅನಿವಾರ್ಯವಾಯಿತು. ಕೌಟುಂಬಿಕ ವಾತಾವರಣದಲ್ಲಿ ಮತ್ತು ಸಂಸ್ಥೆಯ ಸಾರ್ವಜನಿಕ ಕಲಾಪಗಳ ಮಧ್ಯದಲ್ಲಿ ಹಾಗೂ ಸಂಸ್ಥೆಯ ಮಕ್ಕಳೊಂದಿಗೆ ಬೆಳೆದ ಕುಟುಂಬದ ಮಕ್ಕಳು ಹಾಸ್ಟೆಲಿನಲ್ಲಿ ಆಗಲಿ, ಬೇರೆಯವರ ಮನೆಯಲ್ಲಿ ಆಗಲಿ ಇದ್ದುಕೊಂಡು ವಿದ್ಯಾಭ್ಯಾಸಮಾಡುವ ಮನೋಸ್ಥಿತಿಯಲ್ಲಿ ಇರಲಿಲ್ಲ. ಆದ್ದರಿಂದ ಅವರನ್ನು ಬಲವಂತವಾಗಿ ಅಂಥ ಸ್ಥಳಗಳಲ್ಲಿ ಇಡಲು ಮನಸ್ಸಾಗಲಿಲ್ಲ. ಮೈಸೂರು ನಗರದಲ್ಲಿ ಸ್ವಂತ ಮನೆಯೂ ಇಲ್ಲದ್ದರಿಂದ ಮಕ್ಕಳ ವಿದ್ಯಾಭ್ಯಾಸ ಕುಂಠಿತವಾಯಿತು. ಆದರೆ ಕ್ರಮೇಣ ಮೊಮ್ಮಕ್ಕಳು ಉನ್ನತ ವ್ಯಾಸಂಗಕ್ಕೆ ಬರುವ ಹೊತ್ತಿಗೆ ಟ್ರಸ್ಟಿನ ಸಹೃದಯಿ ಸ್ನೇಹಿತರ ಕಾರಣದಿಂದ ಪರಿಸ್ಥಿತಿ ಬದಲಾಯಿತು. ಮೊಮ್ಮಕ್ಕಳ ಉನ್ನತ ವ್ಯಾಸಂಗಕ್ಕಾಗಿ ಮೈಸೂರು ನಗರದಲ್ಲಿ ಸ್ಥಳಾವಕಾಶದ ಶೋಧನೆ ಮಾಡುತ್ತಿರುವ ಪ್ರಯತ್ನದಲ್ಲಿದ್ದಾಗ ಇಬ್ಬರು ಉದಾರ ಸ್ನೇಹಿತರ ಸಹಾಯ

ಕಾರ್ಗತ್ತಲಲ್ಲಿ ಹಣತೆಯ ದೀಪದಂತೆ ಬೆಳಗಿ ಬಂತು. ಹೋಮಿಯೋಪತಿ ವ್ಯಾಸಂಗಮಾಡಲು ಬೆಂಗಳೂರಿಗೆ ಹೋಗಬೇಕಾದ ಪ್ರಸಂಗ ಒಬ್ಬ ಮೊಮ್ಮಗನಿಗೆ ಬಂತು. ಆಗ ಜನಪದ ಸೇವಾ ಟ್ರಸ್ಟಿನ ಹತ್ತು ಹದಿನೈದು ವರ್ಷಗಳಿಗಿಂತಲೂ ಮಿಗಿಲಾದ ಅವಧಿಯಿಂದ ಟ್ರಸ್ಟಿಗೆ ಸಹಾಯಮಾಡುತ್ತಾ ಬಂದಿರುವ ಎಮ್.ಕೆ.ಸುಬ್ಬರಾವ್ ನೆರವಿಗೆ ನಿಂತರು. ಅವನ ಶಿಕ್ಷಣದ ಖರ್ಚಿನ ಕಡೆಗೆ ಪ್ರತಿ ತಿಂಗಳು ಧನ ಸಹಾಯಮಾಡುವ ಭರವಸೆಕೊಟ್ಟರು. ಅದರಿಂದಾಗಿ ಅವನು ಬೆಂಗಳೂರಿನಲ್ಲಿದ್ದುಕೊಂಡು ವ್ಯಾಸಂಗಮಾಡಲು ಸಾಧ್ಯವಾಗಿದೆ. ಸುಬ್ಬರಾವ್‌ರವರ ಈ ಸಹಾಯ ದೊರೆಯದೇ ಹೋಗಿದ್ದರೆ ಮೊಮ್ಮಗನ ವ್ಯಾಸಂಗ ಕುಂಠಿತವಾಗುತ್ತಿತ್ತು ಮತ್ತು ಅವನ ಜೀವನಕ್ಕೆ ಹೊಸದಾರಿ ದೊರೆಯುತ್ತಿರಲಿಲ್ಲ. ಬೆಂಗಳೂರಿನಲ್ಲಿ ಇರುವುದಕ್ಕೆ ಮತ್ತು ವ್ಯಾಸಂಗ ಮಾಡುವುದಕ್ಕೆ ಸಹಾಯಮಾಡಿದ ಸುಬ್ಬರಾವ್ ದಂಪತಿಗಳನ್ನು ಮತ್ತು ಅವರು ಮಾಡುತ್ತಿರುವ ಸಹಾಯವನ್ನು ಪ್ರತಿಕ್ಷಣ ನೆನೆಯುತ್ತೇವೆ. ಅದರಂತೆಯೇ ಸಹಾಯಮಾಡಿದ ಇನ್ನೊಬ್ಬ ಸಹೃದಯಿ ಸ್ನೇಹಿತರನ್ನು ಇಲ್ಲಿ ನೆನೆಯಲೇಬೇಕು. ಅವರೆ ಪ್ರೋ.ವಿ.ಎಸ್.ಶ್ರೀಧರ್. ಜನಪದ ಸೇವಾ ಟ್ರಸ್ಟ್‌ನೊಂದಿಗೆ ಶ್ರೀಧರ್ ಅವರ ಒಡನಾಟ ಹಲವಾರು ವರ್ಷಗಳಿಂದ ಇದೆ. ಅವರು ತಮ್ಮ ಏಕೈಕ ಮಗಳ ಮದುವೆಯನ್ನು ಹೊಸ ಜೀವನ ದಾರಿಯಂಥ ಸಾಧಾರಣವಾದ ಸ್ಥಳದಲ್ಲಿ ಮಾಡಬಯಸಿದ್ದರು. ಆದರೆ ಮದುವೆಗೆ ಬರುವ ಹಿರಿಯ ನಾಗರಿಕರಿಗೆ ತೊಂದರೆ ಆಗಬಹುದೆಂಬ ಕಾರಣದಿಂದ ಅಲ್ಲಿ ಮದುವೆ ಮಾಡಲಾಗದಿದ್ದರೂ ಮದುವೆಯ ಸಂದರ್ಭದಲ್ಲಿ ಬಂದಂಥ ಅತಿಥಿಗಳಿಗೆಲ್ಲ ಅವರವರ ಅಳತೆಗೆ ತಕ್ಕಂತೆ ಖಾದಿ ಬಟ್ಟೆಯನ್ನು ಟ್ರಸ್ಟಿನಲ್ಲಿ ಹೊಲೆಸಿ ಉಡುಗೊರೆಯಾಗಿ ಕೊಟ್ಟದ್ದು ಅವರ ಪ್ರೋತ್ಸಾಹದಾಯಕ ಅಭಿಮಾನವನ್ನು ತೋರಿಸುತ್ತದೆ. ಅಷ್ಟೇ ಅಲ್ಲ ಮುಂದೆ ಮೊಮ್ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಮೈಸೂರು ನಗರದ ವಿದ್ಯಾರಣ್ಯಪುರಂನಲ್ಲಿರುವ ತಮ್ಮ ಮನೆಯನ್ನು ಮಕ್ಕಳು ವಾಸವಾಗಿರಲು ಉಚಿತವಾಗಿ ಕೊಟ್ಟಿದ್ದಾರೆ. ಅದು ಪ್ರತಿ ತಿಂಗಳು ೧೦ರಿಂದ೧೫ಸಾವಿರ ರೂಪಾಯಿ ಬಾಡಿಗೆ ತರುವಂಥ ಮನೆಯಾಗಿದೆ. ಅವರು ಆ ಮನೆಕೊಟ್ಟಿದ್ದರಿಂದಲೇ ಮೊಮ್ಮಕ್ಕಳು ವಿದ್ಯಾಭ್ಯಾಸದಲ್ಲಿ ಮತ್ತು ನೃತ್ಯಕಲೆಯಲ್ಲಿ ಮುಂದೆ ಬರಲು ಸಾಧ್ಯವಾಗಿದೆ. ಅಷ್ಟೇ ಅಲ್ಲ ಟ್ರಸ್ಟಿನ ದತ್ತು ಕೇಂದ್ರದ ಮಕ್ಕಳನ್ನು ಮೈಸೂರಿಗೆ ಕರೆದೊಯ್ಯುವ ಪ್ರಸಂಗ ಬಂದಾಗ ಆ ಮನೆಯಲ್ಲಿ ವಿಶ್ರಾಂತಿ ಪಡೆಯಲು ಸಾಧ್ಯವಾಗಿದೆ. ಸ್ವತಃ ಶ್ರೀಧರ್‌ಅವರು ಮೈಸೂರಿಗೆ ಬಂದಾಗ ತಮ್ಮ ಈ ಮನೆಗೆ ಬಂದು ಸಂತೋಷ ಮತ್ತು ಗೀತಾರವರ ಆತಿಥ್ಯದೊಂದಿಗೆ ಕಾಲಕಳೆಯುತ್ತಾರೆ. ನಮ್ಮ ಸಂತೋಷನೊಂದಿಗೆ ತಮ್ಮ ಸಂತೋಷವನ್ನು ಹಂಚಿಕೊಳ್ಳುತ್ತಾರೆ. ಪ್ರೋ.ಶ್ರೀಧರ್‌ಅವರ ಈ ನೆರವಿಗೆ ಇಂಬುಗೊಟ್ಟು ಅವರ ಪತ್ನಿ ಮಂಗಳ ಮತ್ತು ಮಗಳು ಸುಸ್ಮಿತ ಇದ್ದಾರೆ. ಹೀಗೆ ಶ್ರೀಧರ್ ಅವರ ಇಡೀ ಕುಟುಂಬವೇ ನಮ್ಮ ನೆನೆಕೆಗೆ ಮತ್ತು ಕೃತಜ್ಞತೆಗೆ ಪಾತ್ರವಾಗಿದೆ. ಎಮ್.ಕೆ.ಸುಬ್ಬರಾವ್ ಮತ್ತು ಪ್ರೋ.ಶ್ರೀಧರ್ ಅಂಥವರ ರೀತಿ ಸಹಾಯಮಾಡಿದ ಅನೇಕ ಮಹನೀಯರಿದ್ದಾರೆ. ಅವರೆಲ್ಲರೂ ಪ್ರಾತಃ ಸ್ಮರಣೀಯರು. ೫೬ನೇ ವರ್ಷದ ಆಚರಣೆಯಲ್ಲಿರುವ ಜನಪದ ಸೇವಾ ಟ್ರಸ್ಟ್ ಸಹಾಯಮಾಡಿದ ಎಲ್ಲರನ್ನೂ ನೆನೆಯುವುದರಲ್ಲಿ ತನ್ನ ಆತ್ಮಸಂತೋಷವನ್ನು ಅನುಭವಿಸುತ್ತದೆ. ಸಹಾಯಮಾಡಿದ ಎಲ್ಲರಿಗೂ ಶುಭವಾಗಲೆಂದು ಹಾರೈಸುತ್ತೇವೆ.

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ನವೀಕರಿಸಿದ ಚಂದಾದಾರರು

ಶ್ರೀ.ಕೆ.ಪ್ರಭಾಕರ್ – ಮಂಡ್ಯ
ಶ್ರೀ.ವಿ.ಗಣೇಶ್ – ಮೈಸೂರು

ಹೊಸದಾಗಿ ಪತ್ರಿಕೆಗೆ ಚಂದಾದಾರರಾದವರು

ಶ್ರೀ.ಎಮ್.ಆರ್.ರಾಜೇಶ್ – ಶ್ರೀರಂಗಪಟ್ಟಣ
ಶ್ರೀ.ಹೆಚ್.ಸಿ.ಶಿವಕುಮಾರ್ – ಶಿವಮೊಗ್ಗ
ಶ್ರೀ ಜಿ.ವಿ.ವಿ. ಶಾಸ್ತ್ರೀ – ತುಮಕೂರು

ಇವರೆಲ್ಲರಿಗೆ ಜನಪದ ವಿಚಾರದ ಕೃತಜ್ಞತೆಗಳು

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಕರ್ನಾಟಕದಲ್ಲಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ "ಜನಪದ ವಿಚಾರ" ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತ–ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಯನ್ನು ಬರೆದು ಆಯಾ ತಿಂಗಳ ೧೫ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ ಅಂಚೆ

KA / SK / MND / 470 / 2015-2017
Regd. no. KAR / KAN / 2000 / 3820



ಶ್ರೀಮತಿ/ ಶ್ರೀ.........

500 P. Sundara Murthy
Bluee Cloud Technology
No. 27, N.V. Arcade,
Opp. Reliance Fresh,
Pavitra Paradise
old Circle
Bangalore - 10
Phone : 9482684678 (M)

JANAPADA VICHARA
Kannada Monthly Digest Edited Printed and Published by Surendra Koulagi at janapada seva Trust Melkote, Dist- Mandya - 571431. Phone : 08236 299854 Mob:9141700812
e-mail : janapada@yahoo.com - Web : janapada.org
Printed at chandragiri printers, Mandya- Mob: 9945651584, 9739743237